ANANTHKUMAR PRATISHTHANA

# ಅನಂತಪಥ

ಅಪಾರ ಜನರ
**ಆಪ್ತಮಿತ್ರ ಅನಂತ**



ಪುಟ - 7

**ಶ್ರೀ ಅರುಣ್ ಜೇಟ್ಲಿ** ಮಾಜಿ ಕೇಂದ್ರ ಸಚಿವರು

ಸಂಪುಟ-1 | ಆಗಸ್ಟ್ -2020 | ಸಂಚಿಕೆ -2

## ಪ್ರತಿಷ್ಠಾನದ ಧ್ಯೇಯೋದ್ದೇಶಗಳು ಫಲಿಸಲಿ

### ಚಂದ್ರಶೇಖರ ಕಂಬಾರರ ಆಶಯ

ಅನಂತಕುಮಾರ್ ಜನಿಸಿದ್ದು ೧೯೫೯ ಸೆಪ್ಟೆಂಬರ್ ೨೨. ಆದರೆ ಶಾಲಾ ದಾಖಲೆಗಳಲ್ಲಿ ಅವರ ಜನ್ಮದಿನಾಂಕವನ್ನು ಜುಲೈ ೨೨ ಎಂದು ನಮೂದಿಸಲಾಗಿತ್ತು. ಹೀಗಾಗಿ ಅವರಿಗೆ ಜನ್ಮದಿನದ ಶುಭಾಶಯಗಳೆಲ್ಲ ಬಹುತೇಕ ಜುಲೈ ೨೨ರಂದೇ ತಲುಪುತ್ತಿದ್ದವು. ೨೦೨೦ರ ಇದೇ ದಿನ ಅನಂತಕುಮಾರ್ ಪ್ರತಿಷ್ಠಾನದ ನಿಯತಕಾಲಿಕ ಪತ್ರಿಕೆ 'ಅನಂತಪಥ'ದ ಪ್ರಕಟಣೆಯನ್ನು ಪ್ರಾರಂಭಿಸುತ್ತಿರುವುದೊಂದು ವಿಶೇಷ. ತಿಂಗಳಿಗೊಮ್ಮೆ ಅನಂತಪಥದ ಪ್ರಕಟಣೆಯಾಗಲಿದ್ದು, ಸದ್ಯಕ್ಕೆ ಈ ಪತ್ರಿಕೆಯ ಸಂಚಿಕೆಗಳು ವಿದ್ಯುನ್ಮಾನರೂಪದಲ್ಲಿ ಪ್ರಚುರಗೊಳ್ಳಲಿವೆ. ಕೋವಿಡ್ ಹಾವಳಿಯಿಂದ ದೇಶವು ಮುಕ್ತವಾಗಿ ಸಾಮಾನ್ಯಸ್ಥಿತಿಗೆ ಹಿಂತಿರುಗುತ್ತಿರುವಂತೆಯೇ ಪತ್ರಿಕೆಯ ಮುದ್ರಣರೂಪವೂ ಸಿದ್ಧವಾಗಲಿದೆ.

ಜುಲೈ ೨೨ರಂದು ಅನಂತಪಥದ ಮೊದಲ ಸಂಚಿಕೆಯ ಬಿಡುಗಡೆಯೂ ಅಂತರ್ಜಾಲದ ಮಾಧ್ಯಮದ ಮೂಲಕವೇ ಜರುಗಿದ್ದೊಂದು ವಿಶೇಷ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೂ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಆಗಿರುವ ನಾಡಿನ ಹೆಸರಾಂತ ಕವಿ ಡಾ. ಚಂದ್ರಶೇಖರ ಕಂಬಾರರು ಕಂಪ್ಯೂಟರ್ ಪರದೆಗಳ ಮೇಲೆ ಕಾಣಿಸಿಕೊಂಡು ಮೊದಲ ಸಂಚಿಕೆಯ ಲೋಕಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಂಬಾರರು ಅನಂತಕುಮಾರರ ಅಸಾಮಾನ್ಯ ವ್ಯಕ್ತಿತ್ವವನ್ನು ಸ್ಮರಿಸಿಕೊಂಡರು. ಕರ್ನಾಟಕ ಹಾಗೂ ಕೇಂದ್ರ ಸರ್ಕಾರಗಳ ನಡುವಿನ ಮಹತ್ತ್ವದ ಕೊಂಡಿಯಂತಿದ್ದ ಅನಂತಕುಮಾರ್ ರಾಜ್ಯದ ಸರ್ವತೋಮುಖ ಅಭಿವೃದ್ಧಿಯಲ್ಲಿ ವಹಿಸಿರುವ ಪಾತ್ರ ಗಮನಾರ್ಹವಾದುದೆಂದು ಅವರು ಪ್ರಶಂಸಿಸಿದರು. ಅನಂತಪಥ ಪತ್ರಿಕೆಯ ವಿನ್ಯಾಸವನ್ನು ಮೆಚ್ಚಿದ ಕಂಬಾರರು ಮುಂದಿನ ದಿನಗಳಲ್ಲಿ ಪತ್ರಿಕೆಯು ಅನಂತಕುಮಾರ್ ಪ್ರತಿಷ್ಠಾನದ ಧ್ಯೇಯೋದ್ದೇಶಗಳನ್ನು ಬಿಂಬಿಸುವ ಲೇಖನಗಳ ಮೂಲಕ ಸಾಮಾಜಿಕ ಜಾಗೃತಿಯನ್ನು ಉಂಟು ಮಾಡುವಲ್ಲಿ ಯಶಸ್ವಿಯಾಗಲೆಂದು ಹಾರೈಸಿದರು. ಅನಂತಕುಮಾರರ ಬದುಕಿನ ಯಶಸ್ಸನ್ನು ಬಿಂಬಿಸುವ ವ್ಯಕ್ತಿತ್ವ-ಕರ್ತೃತ್ವ-ನೇತೃತ್ವಗಳೆಂಬ ಮುಖ್ಯಾಂಶಗಳು ನಾಡಿನ ಯುವಜನತೆಯಲ್ಲಿ ಮೈಗೂಡಲೆಂಬ ಆಶಯವನ್ನು ಕಂಬಾರರು ವ್ಯಕ್ತಪಡಿಸಿದರು.



ನೂರಾರು ಜನರು ವೀಕ್ಷಿಸಿದ ಈ ಆನ್ ಲೈನ್ ಕಾರ್ಯಕ್ರಮದಲ್ಲಿ ರಾಜ್ಯ ವಿಧಾನಸಭೆಯ ಮಾನ್ಯ ಸಭಾಪತಿಯವರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರೂ ಭಾಗವಹಿಸಿ ಪತ್ರಿಕೆಗೂ ಅನಂತಕುಮಾರ್ ಪ್ರತಿಷ್ಠಾನಕ್ಕೂ ಶುಭ ಹಾರೈಸಿದರು. *



ನಾಡಿನ ಸಮಸ್ತ ಜನತೆಗೆ

**ಗಣೇಶ ಚತುರ್ಥಿಯ ಹಾರ್ದಿಕ ಶುಭಾಶಯಗಳು.**

**ವಿಘ್ನೇಶ್ವರನು ವರ್ತಮಾನದಲ್ಲಿ ಜಗತ್ತನ್ನು ಆವರಿಸಿರುವ ಅನಾರೋಗ್ಯ, ಅಶಾಂತಿ, ಅಜ್ಞಾನಗಳನ್ನು ನಿವಾರಿಸಿ, ಸಮಸ್ತರಿಗೂ ಸನ್ಮಂಗಳವನ್ನುಂಟುಮಾಡಲೆಂದು ಅನಂತಕುಮಾರ್ ಪ್ರತಿಷ್ಠಾನದ ಪರವಾಗಿ ಭಕ್ತಿಪೂರ್ವಕವಾಗಿ ಕೋರುತ್ತೇವೆ.**

( ಸಾಂದರ್ಭಿಕ ಚಿತ್ರ: ಶ್ರೀ ವಿದ್ಯಾರಣ್ಯ ಯುವಕ ಸಂಘ, ಬೆಂಗಳೂರು ಗಣೇಶೋತ್ಸವ)

**ರಾಮಮಂದಿರ ನಿರ್ಮಾಣವಾಗಲೆಂಬ ಭಾರತೀಯ ಮನಸ್ಸುಗಳ ಕನಸು ನನಸಾಗುತ್ತಿರುವ ಸಂದರ್ಭದಲ್ಲಿ ಹಿನ್ನೆಲೆಯ ನೆನಪು**

## ಸಂಘಟನೆಗೆ ಇಂಬುನೀಡಿದ ರಥಯಾತ್ರೆ

೧೯೮೯-೯೦. ಕರ್ನಾಟಕದಲ್ಲಿ ಭಾರತೀಯ ಜನತಾಪಕ್ಷ ಆಗಿನ್ನೂ ನೆಲೆ ಹುಡುಕತೊಡಗಿದ್ದ ಕಾಲ. ನಾಲ್ವರು ಶಾಸಕರನ್ನು ಹೊರತುಪಡಿಸಿದಂತೆ ಬಿಜೆಪಿಗೆ ಹೇಳಿಕೊಳ್ಳುವ ಸ್ಥಾನಮಾನಗಳೇನೂ ಇರಲಿಲ್ಲ. ಪಕ್ಷದ ಸಂಸದರಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವವರು ಯಾರೂ ಇರಲಿಲ್ಲ. ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಅನಂತಕುಮಾರರಿಗೂ ಪಕ್ಷದ ಬಲವರ್ಧನೆ, ಸಂಘಟನೆ ನಿಜವಾದ ಸವಾಲೇ ಆಗಿದ್ದಿತು.


ಅಯೋಧ್ಯೆಯಲ್ಲಿ ರಾಮಮಂದಿರವನ್ನು ನಿರ್ಮಿಸಲೇಬೇಕೆಂಬ ಭಾರತೀಯರ ಒಕ್ಕೊರಲಿನ ಕೂಗನ್ನು ಹುರಿದುಂಬಿಸುವಂತೆ ಶ್ರೀ ಎಲ್.ಕೆ. ಅಡ್ವಾಣಿಯವರ ರಥಯಾತ್ರೆ ಹೊರಟಿತು. ಗುಜರಾತದ ಸೋಮನಾಥದಿಂದ ಅಯೋಧ್ಯೆಯೆಡೆಗೆ ಈ ಯಾತ್ರೆಯ ಪಯಣ. ದಕ್ಷಿಣಕ್ಕೆ ಹೊರಳಿದ ರಥವು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಕೆಲವು ಭಾಗಗಳನ್ನು ಮಾತ್ರ ಕ್ರಮಿಸುವ ಉದ್ದೇಶ ಹೊಂದಿತ್ತು. ಸಮಗ್ರ ದೇಶದ ಜಾಗೃತಿಗೆ ಹೊರಟ ಯಾತ್ರೆ ಕರ್ನಾಟಕದತ್ತ ಸುಳಿಯುವುದೂ ಬೇಡವೇ? ಚಿಂತಿತರಾದ ಅನಂತಕುಮಾರ್ ಕೂಡಲೇ ಪಕ್ಷದ ಧುರೀಣ ಶ್ರೀ ಪ್ರಮೋದ್ ಮಹಾಜನರನ್ನು ಸಂಪರ್ಕಿಸಿದರು. ಮಹಾರಾಷ್ಟ್ರದಿಂದ ಆಂಧ್ರದತ್ತ ಹೊರಳುವ ಮುನ್ನ ಕರ್ನಾಟಕದ ನೆಲದೊಳಕ್ಕೆ ರಥಯಾತ್ರೆ ಪ್ರವೇಶಮಾಡಿಯೇ ಮುಂದುವರಿಯಬೇಕೆಂದು ಆಗ್ರಹಿಸಿದರು. ಅನಂತಕುಮಾರರ ಒತ್ತಡಕ್ಕೆ ಮಣಿದ ಮಹಾಜನ್ ಅವರು ಅಡ್ವಾಣಿಯವರನ್ನು ಒಪ್ಪಿಸಿ ಒಂದು ದಿನದ ಮಟ್ಟಿಗೆ ರಥಯಾತ್ರೆಯು ಕರ್ನಾಟಕದ ನೆಲದ ಮೂಲಕ ಹಾದುಹೋಗಲು ವ್ಯವಸ್ಥೆ ಮಾಡಿದರು. ಮಹಾರಾಷ್ಟ್ರ-ಆಂಧ್ರಗಳೆರಡರ ಗಡಿಗೂ ಹೊಂದಿಕೊಂಡ ಬೀದರ್ ಜಿಲ್ಲೆಯ ಹುಮ್ನಾಬಾದ್ ಮೂಲಕ ರಥಯಾತ್ರೆ ಕ್ರಮಿಸುವುದೆಂದು ನಿರ್ಧಾರವಾಯಿತು.

ಈ ಸಮಾಧಾನವು ಅಲ್ಪಪ್ರಮಾಣದ್ದಾದರೂ ಸಾರ್ವಜನಿಕವಾಗಿ ದೊಡ್ಡ ಸಂಚಲನವನ್ನೇ ಉಂಟುಮಾಡಿತು. ರಥಯಾತ್ರೆಯನ್ನು ಬರಮಾಡಿಕೊಳ್ಳಲು ಬೃಹತ್ ಸಂಖ್ಯೆಯ ಜನಸ್ತೋಮ ಸಿದ್ಧವಾಯಿತು. ಯಡಿಯೂರಪ್ಪ ಮತ್ತು ಅನಂತಕುಮಾರರ ನೇತೃತ್ವದಲ್ಲಿ ಕಾರ್ಯಕರ್ತರ ದೊಡ್ಡಪಡೆ ಸಜ್ಜುಗೊಂಡಿತು. ಹುಮ್ನಾಬಾದ್ ಪ್ರವೇಶಿಸಿದ ಅಡ್ವಾಣಿಯವರ ರಥಯಾತ್ರೆಗೆ ಅದ್ದೂರಿ ಸ್ವಾಗತ ಲಭ್ಯವಾಯಿತು.

ಅನಂತಕುಮಾರರ ಆಶಯದ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಪಕ್ಷವನ್ನು ಸಂಘಟಿಸುವ ತುಡಿತವೂ ಮಿಳಿತವಾಗಿತ್ತು. ಈ ಮುಂದಾಲೋಚನೆಗೆ ದೊರೆತ ಯಶಸ್ಸು ಕಡಿಮೆಯೇನಲ್ಲ. ರಥಯಾತ್ರೆಗೆ ರಾಜ್ಯದ ಜನತೆ ತೋರಿದ ಉತ್ಸಾಹದ ಪ್ರತಿಕ್ರಿಯೆಯ ಫಲವಾಗಿ ಪಕ್ಷದ ಸಂಘಟನೆಗೂ ಬಲ ಬಂದಿತು. ಮುಂದೆ, ಪಕ್ಷದ ಬಲವರ್ಧನೆ ಯಾವ ಪ್ರಮಾಣದಲ್ಲಿ ಕೈಗೂಡಿತೆಂಬುದನ್ನು ಎಲ್ಲರೂ ಬಲ್ಲರು.

ರಥಯಾತ್ರೆ ಅಯೋಧ್ಯೆಯ ರಾಮಮಂದಿರದ ನಿರ್ಮಾಣದ ಕನಸನ್ನು ನನಸುಗೊಳಿಸುವತ್ತ ಕ್ರಮಿಸಿದ ಪಯಣ ಹೇಗೆ ಸ್ಮರಣೀಯವೋ ಆ ರಥವನ್ನು ಕರ್ನಾಟಕಕ್ಕೆ ಕರೆತರುವ ಮೂಲಕ ರಾಜ್ಯದಲ್ಲಿ ಪಕ್ಷದ ಸಂವರ್ಧನೆಗಾಗಿ ಅನಂತಕುಮಾರ್ ಹೂಡಿದ ಕಾರ್ಯತಂತ್ರವೂ ಅಷ್ಟೇ ಗಮನಾರ್ಹ. *

**ಎಂ.ಹೆಚ್. ಶ್ರೀಧರ**
ಮಾಧ್ಯಮ ಸಹಸಂಚಾಲಕರು,
ಭಾರತೀಯ ಜನತಾಪಕ್ಷ





# ಸಾಮಾನ್ಯರಿಂದ ಅಸಾಮಾನ್ಯ ಸಾಧನೆ ಸಾಧ್ಯ

ಅನಂತಕುಮಾರ್ ಅವರು ನಮ್ಮನ್ನು ಇಷ್ಟು ಬೇಗ ಆಗಲಿ ಹೋಗಿದ್ದಾರೆ ಎಂಬ ಯೋಚನೆಯೇ ನಮ್ಮೆಲ್ಲರಿಗೂ ಆಘಾತವನ್ನುಂಟುಮಾಡಿದೆ. ನನ್ನಂಥ ಅನೇಕ ಮಿತ್ರರು ಈ ಆಘಾತಕ್ಕೆ ಒಳಗಾಗಿದ್ದಾರೆ. ನಾನು ಹೇಗೆ ೪೫ ವರ್ಷಗಳ ಕಾಲ ನಿರಂತರವಾಗಿ ಅನಂತಕುಮಾರ ಅವರ ಜೊತೆ ಕೆಲಸ ಮಾಡುತ್ತಿದ್ದೆನೋ ಹಾಗೆಯೇ ಅವರೊಡನೆ ನಿರಂತರವಾಗಿ ಕೆಲಸ ಮಾಡಿದಂತಹ ಹಲವಾರು ಕಾರ್ಯಕರ್ತರು ಇದ್ದಾರೆ.

ಅವರು ನಮ್ಮನ್ನು ಆಗಲಿ ಹೋದ ಈ ೨ ವರ್ಷಗಳು ಬಹಳ ಬೇಗ ಕಳೆದಂತೆಯೇ ಭಾಸವಾಗುತ್ತದೆ. ನಾವೆಲ್ಲಾ ಸ್ನೇಹಿತರು ಬಹಳ ದಿನಗಳಿಂದ ಅವರ ಷಷ್ಟ್ಯಬ್ದಿ ಕಾರ್ಯಕ್ರಮವನ್ನು ಏರ್ಪಡಿಸಬೇಕೆಂದು ಬಯಸಿದ್ದೆವು. ಆದರೆ ದುರ್ದೈವ ಆ ಷಷ್ಟ್ಯಬ್ದಿ ಕಾರ್ಯಕ್ರಮ ನೆರವೇರಲಿಲ್ಲ.

ಅನಂತಕುಮಾರ್ ಒಬ್ಬ ವ್ಯಕ್ತಿ ಮಾತ್ರ ಅಲ್ಲ. ಅವರು ಒಂದು ವಿಚಾರದ ಪ್ರತಿನಿಧಿಯಾಗಿದ್ದರು. ಯಾವ ವಿಚಾರದಿಂದ ಅವರು ಪ್ರೇರಿತರಾಗಿದ್ದರೋ, ಮತ್ತು ಯಾವ ಸಂಸ್ಕಾರದಿಂದ ಅವರು ಪ್ರೇರಿತರಾಗಿದ್ದರೋ , ಆ ವಿಚಾರವನ್ನು ವಿಸ್ತೃತವಾಗಿ, ಆಳವಾಗಿ ಇಂದಿಗೂ ಉಳಿಸಿರುವುದು ರಾಷ್ಟ್ರೀಯ ಸ್ವಯಂ ಸೇವಕ ಸಂಘ. ಸಂಘದ ರಾಷ್ಟ್ರೀಯ ವಿಚಾರ, ಹಿಂದುತ್ವ ವಿಚಾರ, ಸಮಾಜಕ್ಕೆ ಸೇವೆ ಮಾಡುವ ಒಂದು ಉತ್ಕಟವಾದ ಧ್ಯೇಯ ಅನಂತಕುಮಾರರಿಗೆ ದೊರೆತದ್ದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿದ್ಯಾರ್ಥಿಯಾಗಿದ್ದಾಗ. ಈ ಎಲ್ಲ ವಿಚಾರವನ್ನು ಪ್ರತಿನಿಧಿಸುತ್ತ ಅನಂತಕುಮಾರ್ ಅವರು ವಿದ್ಯಾರ್ಥಿ ಪರಿಷತ್ ನಲ್ಲಿ ಕಾರ್ಯನಿರ್ವಹಿಸಿದರು ಮತ್ತು ರಾಜಕಾರಣದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಅನಂತಕುಮಾರರು ರಾಜಕಾರಣಿಯಾಗಿ ಮಾತ್ರ ತಮ್ಮ ಸೇವೆಯನ್ನು ಸೀಮಿತಗೊಳಿಸಲಿಲ್ಲ. ಸಮಾಜದ ಕಾರ್ಯಕ್ಕೆ ಮತ್ತು ರಾಜಕಾರಣಕ್ಕೆ ತಮ್ಮ ಜೀವನವನ್ನು ಮುಡಿಪಾಗಿಟ್ಟವರು ಅವರು.

ಅನಂತಕುಮಾರರ ವಿಚಾರಗಳು ಸಮಾಜದಲ್ಲಿ ಶಾಶ್ವತವಾಗಿ ಉಳಿಯಬೇಕು ಎಂಬ ಉದ್ದೇಶದಿಂದ ಅನಂತಕುಮಾರರ ಹೆಸರಿನಲ್ಲಿ ಒಂದು ಪ್ರತಿಷ್ಠಾನವನ್ನು ಸ್ಥಾಪಿಸಬೇಕು ಎಂದು ಮಾನ್ಯ ಪಿ. ವಿ. ಕೃಷ್ಣಭಟ್ಟರನ್ನು ವಿನಂತಿಸಿದಾಗ, ಅವರು ಸಂತೋಷದಿಂದ ಅನುಮೋದಿಸಿದರಲ್ಲದೆ, ಪ್ರತಿಷ್ಠಾನದ ಅಧ್ಯಕ್ಷತೆಯನ್ನೂ ವಹಿಸಿಕೊಂಡಿದ್ದಾರೆ. ಶಂಕರ ಆಸ್ಪತ್ರೆಯ ಡಾಕ್ಟರ್ ಶ್ರೀನಾಥ್, ಅನಂತಕುಮಾರರು ಆರೋಗ್ಯವಾಗಿ ನಮ್ಮೊಡನೆ ಇರಲು ಕೊನೆವರೆಗೆ ತಮ್ಮ ಸಂಪೂರ್ಣ ಪ್ರಯತ್ನ ಮಾಡಿದವರು . ಅವರು ಕೂಡ ಅನಂತಕುಮಾರ ಪ್ರತಿಷ್ಠಾನದಲ್ಲಿ ನಮ್ಮೊಂದಿಗಿದ್ದಾರೆ. ತೇಜಸ್ವಿನಿ ಅನಂತಕುಮಾರ್ ಅವರು ಕೌಟುಂಬಿಕವಾಗಿ, ಸಾಮಾಜಿಕವಾಗಿ ಅನಂತಕುಮಾರರಿಗೆ ಹೆಗಲಾಗಿ ನಿಂತಿದ್ದಾರೆ. ಅವರು ಕೂಡ ಅನಂತಕುಮಾರ್ ಪ್ರತಿಷ್ಠಾನದಲ್ಲಿ ನಮ್ಮೊಂದಿಗಿದ್ದಾರೆ.

ಇಂದು ಸಮಾಜಕ್ಕೆ ಒಳ್ಳೆಯ ನೇತೃತ್ವದ ಅವಶ್ಯಕತೆ ಇದೆ. ಅನಂತಕುಮಾರರು ತಮ್ಮ ಜೀವನದಲ್ಲಿ ಸಾಮಾನ್ಯರೂ ಅಸಾಮಾನ್ಯ ಕೆಲಸವನ್ನು ಯಾವ ರೀತಿ ಸಾಧಿಸಬಹುದು ಎಂದು ಪ್ರತ್ಯಕ್ಷವಾಗಿ ತೋರಿಸಿಕೊಟ್ಟಿದ್ದಾರೆ.

ಈ ಎಲ್ಲಾ ಗುಣಗಳನ್ನು ಇಂದಿನ ಯುವಜನತೆಗೆ ತಿಳಿಸುವ ನಿಟ್ಟಿನಲ್ಲಿ ಅನಂತಕುಮಾರ್ ಪ್ರತಿಷ್ಠಾನ ಕಾರ್ಯನಿರ್ವಹಿಸುತ್ತಿದೆ. ಸಮಾಜದ ವಿಭಿನ್ನ ಕ್ಷೇತ್ರಗಳಲ್ಲಿ ನೇತೃತ್ವದ ಗುಣವನ್ನು ನಿರ್ಮಾಣಮಾಡಬೇಕು. ಇಂದಿನ ಯುವಜನತೆಯಲ್ಲಿ ರಾಷ್ಟ್ರೀಯತೆಯ ಮನೋಭಾವನೆಯನ್ನು ಮೂಡಿಸಬೇಕು ಎನ್ನುವುದೇ ಅನಂತಕುಮಾರ್ ಪ್ರತಿಷ್ಠಾನದ ಉದ್ದೇಶ.

ರಾಜ್ಯ ಸರ್ಕಾರವೂ ಅನಂತಕುಮಾರ್ ಪ್ರತಿಷ್ಠಾನಕ್ಕೆ ೨೦ ಕೋಟಿ ರೂಪಾಯಿಗಳ ಅನುದಾನವನ್ನು ಮಂಜೂರು ಮಾಡಿದೆ.. ಹೀಗೆ ಸಾಮಾಜಿಕ ಕಳಕಳಿಯನ್ನು ಇಂದಿನ ಯುವಜನತೆಯಲ್ಲಿ ಮೂಡಿಸುವಲ್ಲಿ ಅನಂತಕುಮಾರ್ ಪ್ರತಿಷ್ಠಾನ ಕಾರ್ಯನಿರ್ವಹಿಸತೊಡಗಿದೆ. ಅನಂತಕುಮಾರರ ವಿಚಾರಗಳನ್ನು ಪುಸ್ತಕಗಳ ರೂಪದಲ್ಲಿ ಹೊರತರಲು ಪ್ರಕಾಶನ ವಿಭಾಗವನ್ನು ಪ್ರಾರಂಭಿಸಲಾಗಿದೆ. ಪ್ರಕಾಶನ ವಿಭಾಗವನ್ನು ಶ್ರೀ ಟಿ.ಎಸ್ ಗೋಪಾಲ್ ಅವರು ನಿರ್ವಹಿಸುತ್ತಿದ್ದಾರೆ. ಪ್ರತಿಷ್ಠಾನದ ನಿಯತಕಾಲಿಕ 'ಅನಂತಪಥ' ಪತ್ರಿಕೆಯು ಅನಂತಕುಮಾರರ ವಿಚಾರಗಳನ್ನು ಮತ್ತು ಆಲೋಚನೆಗಳನ್ನು ಜನತೆಗೆ ತಲುಪಿಸುವಲ್ಲಿ ಮುಖ್ಯಪಾತ್ರವನ್ನು ನಿರ್ವಹಿಸುತ್ತದೆ ಎಂದು ನಾನು ಆಶಿಸುತ್ತೇನೆ.*

**ಡಾ. ವಿಷ್ಣುಕಾಂತ ಚಟಪಲ್ಲಿ**
ಕುಲಪತಿ
ಕರ್ನಾಟಕ ರಾಜ್ಯ ಗ್ರಾಮೀಣ ಅಭಿವೃದ್ಧಿ ಮತ್ತು
ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯ
ರೈತ ಭವನ, ಜನರಲ್ ಕಾರ್ಯಪ್ಪ ವೃತ್ತ
ಗದಗ-೫೮೨೧೦೧



ಎರಡು ವರ್ಷಗಳ ಹಿಂದೆ , ಅನಂತಕುಮಾರ್ ಅವರು ತೀರಿಕೊಂಡ ಸಂದರ್ಭದಲ್ಲಿ (೨೦೧೮) , ಧಾರವಾಡದ ಹಿರಿಯ ಕವಿ ಶ್ರೀ ನರಸಿಂಹ ಪರಾಂಜಪೆಯವರು 'ಅನಂತ ನಮನ ' ಎಂಬ ಕವಿತೆಯನ್ನು ರಚಿಸಿ ಶ್ರದ್ಧಾಂಜಲಿ ಸಲ್ಲಿಸಿದ್ದರು. ಈ ಕವಿತೆಯಲ್ಲಿ ಅನಂತಕುಮಾರರು ನಡೆದ ಹಾದಿಯನ್ನು ವರ್ಣಿಸುತ್ತಾ ಕವಿ ಅದೊಂದು 'ಕನಸುಗಂಗಳ ಯಾತ್ರೆ' ಎಂದು ಹೇಳುವುದು ಗಮನಾರ್ಹವಾಗಿದೆ. (ಪುಟ ೪ ನೋಡಿ)

ಕವಿ ಚಿತ್ರಿಸಿರುವಂತೆ, ನೈಜ ಜೀವನದಲ್ಲಿಯೂ ಅನಂತಕುಮಾರ್ ಕನಸುಗಣ್ಣಿನ ಯಾತ್ರೆಯನ್ನು ಸವೆಸಿದವರು. ಹಿರಿಯರಾದ ಪ್ರೊ. ಕೃಷ್ಣಭಟ್ ಅವರಿಂದಲೂ ತಮ್ಮ ತಾಯಿ ಗಿರಿಜಾ ಶಾಸ್ತ್ರಿಯವರಿಂದಲೂ ಮಾರ್ಗದರ್ಶನವನ್ನು ಪಡೆದ ಅನಂತಕುಮಾರ್ ಅವರಿಗೆ 'ವ್ಯಕ್ತಿತ್ವ ನಿರ್ಮಾಣದಿಂದಲೇ ದೇಶದ ನಿರ್ಮಾಣ ಸಾಧ್ಯ' ಎಂಬುದು ಅರಿವಾಗಿತ್ತು. ಅಂತಹ ಒಂದು ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವುದಕ್ಕೆ ಬೇಕಾದ ಮೌಲ್ಯಗಳನ್ನು ಅಳವಡಿಸಿಕೊಂಡು ಅದರ ಫಲವಾಗಿ ಅವರು ಸಮುದಾಯದ ನೇತೃತ್ವವನ್ನು ವಹಿಸಿಕೊಂಡು ಕರ್ತೃತ್ವದ ಶಕ್ತಿಯಾಗಿ ನಮ್ಮೆಲ್ಲರಿಗೂ ಮಾದರಿಯಾದದ್ದನ್ನು ನಾವೆಲ್ಲರೂ ನೋಡಿದ್ದೇವೆ.

ದುರದೃಷ್ಟವಶಾತ್ ಈ ಕನಸುಗಣ್ಣಿನ ಯಾತ್ರೆ ಅಪೂರ್ಣವಾಗಿದೆ. ಆ ಅಪೂರ್ಣವಾದ ಯಾತ್ರೆಯಲ್ಲಿ, ಅನಂತಕುಮಾರ್ ಕ್ರಮಿಸಲೆತ್ನಿಸಿದ ಕನಸುಗಣ್ಣಿನ ಯಾತ್ರೆಯಲ್ಲಿ ರಾಜ್ಯದ ಯುವಜನತೆಯನ್ನು ಕರೆದೊಯ್ಯುವ ಜವಾಬ್ದಾರಿಯನ್ನು ವಹಿಸಿ, ಮುನ್ನಡೆಸಬೇಕೆಂದು ಅನಂತಕುಮಾರ್ ಪ್ರತಿಷ್ಠಾನದ ನಿರ್ವಾಹಕಮಂಡಳಿ ಉತ್ಸಾಹದಿಂದ ಸಿದ್ಧತೆ ನಡೆಸಿದೆ. ಪ್ರತಿಷ್ಠಾನದ ಕಾರ್ಯಸೂಚಿಯ ಒಂದು ಭಾಗವಾಗಿ ಅನಂತ ಪಥ ಎಂಬ ನಿಯತಕಾಲಿಕವನ್ನು ಹೊರತರುತ್ತಿದ್ದೇವೆ. ಅನಂತಪಥ ಪತ್ರಿಕೆಯು ಅನಂತಕುಮಾರ್ ಅವರ ಜೀವನ ಮೌಲ್ಯಗಳನ್ನು ಪ್ರತಿಪಾದಿಸುವ ಉತ್ತಮ ಲೇಖನಗಳನ್ನು ನೀಡಲಿದೆ. ಅನಂತಕುಮಾರ್ ಪ್ರತಿಷ್ಠಾನ ಹಮ್ಮಿಕೊಳ್ಳುವ ಕಾರ್ಯಕ್ರಮಗಳ ಪರಿಚಯದ ಜೊತೆ ಅನಂತಕುಮಾರ್ ಅವರ ವ್ಯಕ್ತಿತ್ವ, ಅವರ ಒಡನಾಡಿದ ಹಿರಿಯ ಕಿರಿಯ ಸಮಕಾಲೀನರ ಅನಿಸಿಕೆಗಳನ್ನು ಇಲ್ಲಿನ ಪುಟಗಳಲ್ಲಿ ನೀವು ಓದಲಿದ್ದೀರಿ. ಪ್ರತಿಷ್ಠಾನವು ಆಗಿಂದಾಗ್ಗೆ ಹಮ್ಮಿಕೊಳ್ಳುವ ಸಾಮಾಜಿಕ ಮೌಲ್ಯಗಳ ತರಬೇತಿ ಕಾರ್ಯಕ್ರಮಗಳ ವಿವರಗಳು, ಉಪನ್ಯಾಸಗಳ ಪಠ್ಯರೂಪ ಎಲ್ಲವನ್ನು ಅನಂತಪಥದ ಮೂಲಕ ತಲುಪಿಸುವ ಪ್ರಯತ್ನ ಮಾಡಲಿದ್ದೇವೆ. ನಮ್ಮ ಯುವ ಜನತೆಯನ್ನು ನೇತೃತ್ವ ವಹಿಸಿಕೊಳ್ಳುವೆಡೆಗೆ ಮತ್ತು ಕರ್ತೃತ್ವವನ್ನು



**ಟಿ ಎಸ್ ಗೋಪಾಲ್**
ಮುಖ್ಯಸ್ಥರು, ಪ್ರಕಾಶನ ವಿಭಾಗ,
ಅನಂತಕುಮಾರ್ ಪ್ರತಿಷ್ಠಾನ

# ಅನಂತಪಥದಲ್ಲಿ ಕನಸುಗಣ್ಣಿನ ಯಾತ್ರೆ

ಅಳವಡಿಸಿಕೊಳ್ಳುವೆಡೆಗೆ ಪ್ರೇರೇಪಿಸುವಲ್ಲಿ ಅನಂತಪಥ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿದೆಯೆಂದು ನಾನು ಆಶಿಸುತ್ತೇನೆ.

ಇನ್ನು ಮುಂದಿನ ಸಂಚಿಕೆಗಳಲ್ಲಿ , ನಾನು ಕಂಡಂತೆ ಅನಂತಕುಮಾರ್ ಎಂಬ ಮಾಲಿಕೆ ಮುಂದುವರಿಯಲಿದ್ದು ಅನಂತಕುಮಾರ್ ಅವರೊಂದಿಗೆ ಒಡನಾಡಿದ ಗುರುಹಿರಿಯರ ಮಾತುಗಳೂ , ಸ್ವಾರಸ್ಯಕರ ಘಟನೆಗಳೂ ಪ್ರಕಟಗೊಳ್ಳಲಿವೆ. ಅಲ್ಲದೆ ಅನಂತಕುಮಾರ್ ಪ್ರತಿಷ್ಠಾನ ಕೈಗೊಳ್ಳುವ ತರಬೇತಿ ಕಾರ್ಯಕ್ರಮಗಳ ಪಠ್ಯರೂಪಗಳು . ಜೀವನ ಮೌಲ್ಯಗಳನ್ನು ಬಿಂಬಿಸುವ ಲೇಖನಗಳನ್ನು ಅನಂತಪಥದ ಸಂಚಿಕೆಗಳಲ್ಲಿ ನೀಡಬೇಕು ಎಂದು ಬಯಸುತ್ತೇವೆ. ಮುಂದಿನ ದಿನಗಳಲ್ಲಿ ಅನಂತಕುಮಾರ್ ಪ್ರತಿಷ್ಠಾನದ ಪ್ರಕಾಶನ ವಿಭಾಗವು ಅನಂತಕುಮಾರರ ಜೀವನ ಚರಿತ್ರೆಯನ್ನು ಹೊರತರುವ ಪ್ರಯತ್ನದಲ್ಲಿದೆ. "ಉಳಿದವರು ಕಂಡಂತೆ ಅನಂತಕುಮಾರ್" ಎಂಬ ಲೇಖನಸಂಕಲನ , ಅನಂತಕುಮಾರ್ ಅವರ ವ್ಯಕ್ತಿತ್ವವನ್ನು ಮಕ್ಕಳಿಗೆ ಪರಿಚಯ ಮಾಡಿಕೊಡುವ ಪುಸ್ತಕಗಳು, ಅನಂತಕುಮಾರರ ಅಪೂರ್ವ ಚಿತ್ರಗಳ ಸಂಕಲನಪುಸ್ತಕ ಮೊದಲಾದವುಗಳ ಪ್ರಕಟಣೆಯ ಯೋಜನೆಯೂ ಇದೆ. ಎಲ್ಲದಕ್ಕೂ ಮಿಗಿಲಾಗಿ, ಆಕಾಶವಾಣಿಯಲ್ಲಿ ಪ್ರಸಾರಮಾಡಲು ಅನಂತಕುಮಾರರ ಬಗೆಗಿನ ವಿಚಾರಗಳನ್ನು ಒಳಗೊಂಡ ಸರಣಿ ಕಾರ್ಯಕ್ರಮವನ್ನು ಸೆಪ್ಟೆಂಬರ್ ನಿಂದ ಪ್ರಾರಂಭಿಸಲು ಸಿದ್ಧತೆ ನಡೆದಿದೆ.

ಅನಂತಪಥದ ಮೊದಲ ಸಂಚಿಕೆಯ ಲೋಕಾರ್ಪಣೆಮಾಡಿದ ಖ್ಯಾತ ಕವಿ ಡಾ. ಚಂದ್ರಶೇಖರ ಕಂಬಾರರು ತಮ್ಮ ಒಂದು ಪದ್ಯದಲ್ಲಿ ಕವಿಯ ಸಂಕಲ್ಪ ಹೇಗಿರಬೇಕೆಂಬುದನ್ನು ವರ್ಣಿಸುವುದು ಹೀಗೆ:

ಕ್ಷಿತಿಜದ ಬೆಳಕಲ್ಲಿ ಬೆಳಕು ಹೊಳೆಯೊ ಹಾಂಗ
ಹಾಡಬೇಕೋ ತಮ್ಮಾ ಹಾಡಬೇಕು
ಕಲ್ಲಿನ ಎದೆಯಲ್ಲಿ ಜೀವಜಲ ಚಿಲ್ಲೆಂದು
ಚಿಮ್ಮುವಂಥಾ ಹಾಡ ಹಾಡಬೇಕು
ಆಕಾಶದಂಗಳ ಬೆಳದಿಂಗಳೂ ಕೂಡಾ
ಕಂಗಾಲಾಗುವ ಹಾಡ ಹಾಡಬೇಕು

ಮೇಲಿನ ಕವಿತೆಯ ಆಶಯವು ಎಲ್ಲ ರೀತಿಯಲ್ಲೂ ಅನಂತಕುಮಾರರ ಜೀವನದ ಆಶಯ, ಪ್ರಯತ್ನಗಳಿಗೂ ಅನ್ವಯವಾಗುತ್ತವೆ ಎಂಬುದು ಅವರ ಬದುಕಿನ ಎತ್ತರ ಯಶಸ್ಸುಗಳನ್ನು ಬಲ್ಲವರಿಗೆ ಮನವರಿಕೆಯಾಗುತ್ತದೆ. ಇದೇ ನಿಟ್ಟಿನಲ್ಲಿ ಪ್ರತಿಷ್ಠಾನವೂ ಬದುಕಿನ ಶ್ರೇಷ್ಠಮೌಲ್ಯಗಳನ್ನು ಜನಸಾಮಾನ್ಯರಿಗೆ ತಲುಪಿಸುವ ಪ್ರಯತ್ನದಲ್ಲಿ ನಿರಂತರವಾಗಿ ತೊಡಗಿರುವುದೆಂಬ ಆಶಾಭಾವ ನಮ್ಮದು. *

ಅಪೂರ್ವಸ್ಮರಣೆ

# ಸ್ವಾಭಿಮಾನಿ ಧೀಮಂತ ನಾರಾಯಣ ಶಾಸ್ತ್ರಿ : ಒಂದು ನೆನಪು

ಟಿ. ರಂಗರಾಜನ್ ನಿರೂಪಣೆ : ಟಿ.ಎಸ್.ಗೋಪಾಲ್



೧೯೯೮. ಹುಬ್ಬಳ್ಳಿಯ ವಿಶ್ವೇಶ್ವರ ನಗರದಲ್ಲಿ ಒಂದು ಕಾರ್ಯಕ್ರಮ ಏರ್ಪಾಡಾಗಿತ್ತು. ಕೆಲವು ದಿನಗಳ ಹಿಂದೆ ತೀರಿಕೊಂಡಿದ್ದ ನಾರಾಯಣ ಶಾಸ್ತ್ರಿಗಳ ಸ್ಮರಣೆಗಾಗಿ ಏರ್ಪಡಿಸಲಾಗಿದ್ದ ಒಂದು ಸರಳ ಕಾರ್ಯಕ್ರಮ. ಶಾಸ್ತ್ರಿಗಳಿಗೆ ಶ್ರದ್ಧಾಂಜಲಿ ಅರ್ಪಿಸುವ ಸಲುವಾಗಿ ಅನೇಕರು ಅಲ್ಲಿ ಬಂದು ಸೇರಿದ್ದರು. ಹಾಗೆ ಬಂದ ಜನರಲ್ಲಿ ಶಾಸ್ತ್ರಿಗಳ ಸಹೋದ್ಯೋಗಿಗಳು, ಅನಂತಕುಮಾರ್ ಅವರ ಬಂಧು ಬಳಗದವರು. ಸ್ಥಳೀಯ ಸಾರ್ವಜನಿಕರು ಮೊದಲಾದವರು ಇದ್ದರು. ಶಾಸ್ತ್ರಿಗಳನ್ನು ಬಲ್ಲ ಹಲವರು, ಅಂದು ಮೃತರಿಗೆ ಅರ್ಪಿಸುವ ನುಡಿ ನಮನದಲ್ಲಿ ತಾವೂ ವೇದಿಕೆಯಲ್ಲಿ ನಾಲ್ಕಾರು ಮಾತುಗಳನ್ನಾಡಲು ಉತ್ಸುಕರಾಗಿದ್ದರು.

ಸಭೆ ಪ್ರಾರಂಭವಾಯಿತು. ಮೊದಲಿಗೆ ಮಾತಿಗೆ ತೊಡಗಿದವರು ಅನಂತಕುಮಾರ್. ನಾವು ಇವತ್ತು ತೀರ್ಥರೂಪರಾದ ನಾರಾಯಣ ಶಾಸ್ತ್ರಿಯವರಿಗೆ ಶ್ರದ್ಧಾಂಜಲಿ ಅರ್ಪಿಸುವ ಸಲುವಾಗಿ ಸೇರಿದ್ದೇವೆ. ಅವರ ಬಗ್ಗೆ ನಾಲ್ಕಾರು ಮಾತುಗಳನ್ನಾಡಲು ಹಲವರು ಕಾತುರರಾಗಿದ್ದೀರೆಂದು ಭಾವಿಸುತ್ತೇನೆ. ನಾರಾಯಣ ಶಾಸ್ತ್ರಿಗಳ ವ್ಯಕ್ತಿತ್ವ, ವೈಶಿಷ್ಟ್ಯಗಳ ಬಗ್ಗೆ ನಮಗೆಲ್ಲ ತಿಳಿದಿರುವುದು ಅತ್ಯಲ್ಪ. ನಿಜ ಹೇಳಬೇಕೆಂದರೆ, ನಾರಾಯಣ ಶಾಸ್ತ್ರಿಯವರ ಮಗನಾದ ನನಗೂ ಅವರ ಬಗೆಗೆ ಹೆಚ್ಚೇನೂ ತಿಳಿದೇ ಇಲ್ಲ. ಶಾಸ್ತ್ರಿಗಳನ್ನು ನಿಕಟವಾಗಿ ಬಲ್ಲ, ಅವರ ವ್ಯಕ್ತಿತ್ವವನ್ನು ಪರಿಚಯಿಸ ಬಲ್ಲ ಒಬ್ಬರೇ ವ್ಯಕ್ತಿ ಇಲ್ಲಿ ನಮ್ಮೊಡನಿದ್ದಾರೆ. ಅವರೇ ಶ್ರೀ ರಂಗರಾಜನ್ ಮಾಮ. ಅವರೊಬ್ಬರಿಗೆ ಮಾತ್ರವೇ ನಾರಾಯಣ ಶಾಸ್ತ್ರಿಯವರನ್ನು ಕುರಿತು ಅಧಿಕೃತವಾಗಿ ಮಾತನಾಡಲು ಸಾಧ್ಯ.ವೆಂದು ನಾನು ಭಾವಿಸುತ್ತೇನೆ. ಹೀಗಾಗಿ ಇಂದು ರಂಗರಾಜನ್ ಮಾಮ ಮಾತ್ರವೇ ಮಾತನಾಡುತ್ತಾರೆ. ಮಾಮ, ದಯವಿಟ್ಟು ವೇದಿಕೆಗೆ ಬಂದು ಮಾತನಾಡಬೇಕು ಎಂದು ಹೇಳಿದ ಅನಂತಕುಮಾರ್ ಹಿರಿಯರಾದ ರಂಗರಾಜನ್ ಅವರನ್ನು ವೇದಿಕೆಗೆ ಕರೆದರು.

*******

೧೯೫೭. ರೈಲ್ವೆ ಇಲಾಖೆಯು ಮೈಸೂರು ವಿಭಾಗದ ಕಛೇರಿಯಲ್ಲಿ ಅಕೌಂಟೆಂಟ್ ಹುದ್ದೆಗಳಿಗಾಗಿ ಅರ್ಜಿ ಕರೆದಿದ್ದರು. ಈ ನೇಮಕಾತಿಗಾಗಿ ಆಯ್ಕೆಯಾದವರಲ್ಲಿ ಟಿ.ರಂಗರಾಜನ್ ಅವರು ಒಬ್ಬರು. ಹೊಸದಾಗಿ ಸೇರ್ಪಡೆಗೊಂಡವರಿಗೆಲ್ಲ ಈಗಾಗಲೇ ಕಛೇರಿಯಲ್ಲಿ ಇದ್ದ ಅನೇಕ ಹಳಬರನ್ನು ಪರಿಚಯಮಾಡಿಕೊಳ್ಳುವುದಕ್ಕಿಂತ ತಮ್ಮಂತೆಯೇ ಇತ್ತೀಚೆಗೆ ನೇಮಕಗೊಂಡ ಹೊಸಬರನ್ನು ಹುಡುಕಿ ಮಾತನಾಡುವುದರಲ್ಲೇ ಹೆಚ್ಚಿನ ಆಸಕ್ತಿ. ಹಾಗೇ ಹೊಸದಾಗಿ ನೇಮಕಗೊಂಡವರಲ್ಲಿ, ರಂಗರಾಜನ್ ಸೇರಿದಂತೆ ಉದ್ಯೋಗಿಗಳೆಲ್ಲರ ಗಮನವನ್ನೂ ತನ್ನೆಡೆಗೆ ಸೆಳೆದುಕೊಂಡ ಮಹನೀಯರು ತಮ್ಮ ಎತ್ತರದಿಂದಲೂ ಗಾತ್ರದಿಂದಲೂ ಆಕರ್ಷಕವಾಗಿ ಕಂಡರು. ಅವರೇ ನಾರಾಯಣ ಶಾಸ್ತ್ರಿ. ಬೆರಗು ಮೂಡಿಸುವ ದೈಹಿಕ ಸ್ವರೂಪವುಳ್ಳ. ಶಾಸ್ತ್ರಿಗಳ ಸ್ನೇಹವನ್ನು ಸಂಪಾದಿಸಿದ ಮೇಲೆ ರಂಗರಾಜನ್ ಒಮ್ಮೆ ಸಂಕೋಚದಿಂದಲೇ ಶಾಸ್ತ್ರಿಗಳು ಅಷ್ಟು ದಷ್ಟಪುಷ್ಟವಾಗಿರುವುದರ ರಹಸ್ಯವೇನೆಂದು ವಿಚಾರಿಸಲು ಮುಂದಾದರು. ಶಾಸ್ತ್ರಿಗಳು ಏನ್ರೀ, ನನ್ನನ್ನು ಏನೆಂದು ಕೊಂಡಿದ್ದೀರಿ ನಾನು. ಸ್ಟೇಟ್ ರೆಸ್ಲರ್ ಗೊತ್ತಾ!




ಎಂದು ಹೆಮ್ಮೆಯಿಂದ ವರ್ಣಿಸಿಕೊಂಡರು. ರಾಜ್ಯ ಮಟ್ಟದ ಕುಸ್ತಿ ಪಟುವಿನ ದೇಹದಾರ್ಢ್ಯವನ್ನು ಪ್ರತ್ಯಕ್ಷವಾಗಿಯೇ ಕಾಣುತ್ತಿರುವಾಗ ಆಶ್ಚರ್ಯ ಪಡಲು ಕಾರಣ ಇರಲಿಲ್ಲ. ರಂಗರಾಜನ್ ಗೆಳೆಯನ ಬಗ್ಗೆ ಮೆಚ್ಚುಗೆ ಸೂಚಿಸುತ್ತ. ಸಂತೋಷ ಕಣಪ್ಪ. ಆದರೆ ನಿಮ್ಮನ್ನು ನೋಡುವಾಗ, ನಿಮ್ಮ ಜೊತೆ ಮಾತನಾಡುವಾಗ ಸ್ವಲ್ಪ ಹೆದರಿಕೆಯೂ ಆಗುತ್ತೆ. ಎಂದು ಮೆಲ್ಲನೆ ಉಸುರಿದರು!

ನಾರಾಯಣ ಶಾಸ್ತ್ರಿಯವರು ಮೈಸೂರಿನವರೇ. ಅವರ ತಂದೆ ನರಹರಿ ಶಾಸ್ತ್ರಿಗಳು ಮೈಸೂರು ಮಹಾರಾಜರ ಮನ್ನಣೆಗೆ ಪಾತ್ರರಾಗಿದ್ದ ಹೆಸರಾಂತ ಜ್ಯೋತಿಷಿಗಳು. ತಂದೆಯವರಿಂದ ಪಡೆದ ಜ್ಯೋತಿಷ್ಯ ಜ್ಞಾನ ಶಾಸ್ತ್ರಿಯವರ ಬೌದ್ಧಿಕ ಸಂಪತ್ತನ್ನು ಹೆಚ್ಚಿಸಿದರೆ, ಅಂಗ ಸಾಧನೆ, ಮೈಸೂರು ಗಡಿಯ ಕುಸ್ತಿ ವರಸೆಗಳು ಅವರ ದೈಹಿಕ ಶ್ರೀಮಂತಿಕೆಯನ್ನು ಮಿಗಿಲುಗೊಳಿಸಿದ್ದವು. ರೈಲ್ವೆ ಇಲಾಖೆಯ ಕೆಲಸಕ್ಕೆ ಸೇರುವ ಹೊತ್ತಿಗಾಗಲೇ ನಾರಾಯಣ ಶಾಸ್ತ್ರಿಗಳಿಗೆ ಮದುವೆಯೂ ಆಗಿತ್ತು. ಶಾಸ್ತ್ರಿಯವರ ಕೈ ಹಿಡಿದು ಮನೆ ತುಂಬಿದ್ದವರು, ಬೆಂಗಳೂರಿನ ಪ್ರತಿಷ್ಠಿತ ಮನೆತನವೊಂದರ ಗಿರಿಜಾ ಎಂಬ ವಿದ್ಯಾವಂತ ಕನ್ಯೆ. ಶಾಸ್ತ್ರಿಯವರಿಗೆ ಕೆಲಸ ಸಿಕ್ಕಿ ಎರಡು ವರ್ಷವಾಗುವುದರೊಳಗೆ ಇಲಾಖೆ ಅವರನ್ನು ಹುಬ್ಬಳ್ಳಿಗೆ ವರ್ಗ ಮಾಡಿತು.

ಆರೇಳು ತಿಂಗಳ ತರುವಾಯ ರಂಗರಾಜನ್‌ರಿಗೂ ಹುಬ್ಬಳ್ಳಿಗೆ ವರ್ಗವಾಯಿತು. ಹುಬ್ಬಳ್ಳಿಗೆ ಬಂದವರೇ ತಮಗಿಂತ ಮೊದಲು ಅಲ್ಲಿಗೆ ತಲುಪಿದ್ದ ಗೆಳೆಯ ಶಾಸ್ತ್ರಿಯವರನ್ನು ಹುಡುಕಿದರು. ಶಾಸ್ತ್ರಿಯವರಿಗಾಗಲಿ ಅವರಂತೆ ಹುಬ್ಬಳ್ಳಿಗೆ ವರ್ಗವಾಗಿ ಬಂದ ಇತರರಿಗಾಗಲಿ ರೈಲ್ವೆ ಇಲಾಖೆಯು ಕ್ವಾರ್ಟರ್ಸ್ ಸೌಲಭ್ಯವನ್ನೇನೂ ಒದಗಿಸಿರಲಿಲ್ಲ. ಶಾಸ್ತ್ರಿಗಳು ಹಳೇ ಹುಬ್ಬಳ್ಳಿಯಲ್ಲೆಲ್ಲೋ ಮನೆ ಮಾಡಿಕೊಂಡಿದ್ದರು. ಅಲ್ಲಿರುವುದು ಅನನುಕೂಲವೆಂದು ತೋರಿದ್ದರಿಂದ ಕೇಶ್ವಾಪುರ ರಸ್ತೆಯ ಸಮೀಪದಲ್ಲಿದ್ದ ವಾಗ್ಮೊರೆ ಚಾಳಿನಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸಿಸುತ್ತಿದ್ದರು. ಅದೇ ಆವರಣದಲ್ಲಿ ಶಾಸ್ತ್ರಿಗಳ ಸಹೋದ್ಯೋಗಿಗಳಾದ ಸೂರ್ಯನಾರಾಯಣ, ಕೃಷ್ಣಮೂರ್ತಿ ಮತ್ತಿತರ ಕೆಲವು ಸ್ನೇಹಿತರು ಇದ್ದರು.

ಮರಿಯನ್ ತಿಮ್ಮಸಾಗರ ಎಂಬುದರ ಸಂಕ್ಷೇಪವೇ ಎಮ್.ಟಿ.ಎಸ್. ಈ ತಿಮ್ಮಸಾಗರ ಎಂಬಾತ ಬೆಳಗಾವಿ ರಸ್ತೆಯಲ್ಲಿದ್ದ ಭಾರತ್ ಮಿಲ್ ಕಾರ್ಮಿಕರ ಸೌಕರ್ಯಕ್ಕೆಂದು ಮಿಲ್ ಎದುರಿಗಿದ್ದ ತನ್ನ ಭೂಮಿಯಲ್ಲಿ ನೂರಕ್ಕೂ ಹೆಚ್ಚು ಮನೆಗಳನ್ನು ಕಟ್ಟಿಸಿದ್ದ. ಆದರೆ ಭಾರತ್ ಮಿಲ್ ಈ ಮನೆಗಳನ್ನು ಕಾರ್ಮಿಕರ ವಸತಿ ಸೌಕರ್ಯಕ್ಕೆ ಬಳಸಿಕೊಳ್ಳಲು ನಿರಾಕರಿಸಿದ್ದರಿಂದ ಮನೆಗಳು ಹಾಗೇ ಉಳಿದಿದ್ದವು. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಭಾರತ್ ಮಿಲ್ ಒಡೆತನ ಹೊಂದಿದ್ದ ಯೂರೋಪಿಯನ್ ವ್ಯಕ್ತಿ ಕಾರ್ಖಾನೆಯ ಒಂದು ಭಾಗಕ್ಕೆ ಬೆಂಕಿಕೊಟ್ಟು ಅವಘಡವಾದಂತೆ ತೋರಿಸಿಕೊಟ್ಟು. ವಿಮೆಯ ಹಣ ಕಬಳಿಸಿ ತನ್ನ ದೇಶಕ್ಕೆ ಹೊರಟು ಹೋದ. ಭಾರತ್ ಮಿಲ್ ಕಾರ್ಮಿಕರ ವಶಕ್ಕೆ ಬಂದರೂ ನೌಕರರಿಗೆ ವಸತಿ ಸೌಕರ್ಯ ಕಲ್ಪಿಸುವಷ್ಟು ಸುಸ್ಥಿತಿಯಲ್ಲಿ ಇರಲಿಲ್ಲ. ಈ ಸನ್ನಿವೇಶದಲ್ಲಿ ರೈಲ್ವೆ ಇಲಾಖೆಯು ಹುಬ್ಬಳ್ಳಿ ವಲಯವನ್ನು ಪ್ರಾರಂಭಿಸಿ ಅನೇಕ ಸಿಬ್ಬಂದಿಯನ್ನು ನೇಮಿಸಿಕೊಳ್ಳುವಾಗ ಈ ಮನೆಗಳನ್ನು ಇಲಾಖೆಯ ನೌಕರರ ಕ್ವಾರ್ಟರ್ಸ್ ಆಗಿ ಬಳಸಿಕೊಳ್ಳಲು ಒಪ್ಪಿಕೊಂಡಿತು. ತಿಮ್ಮಸಾಗರನ ಅದೃಷ್ಟ ಚೆನ್ನಾಗಿತ್ತು. ಅವನು ಯೋಚಿಸಿಕೊಂಡಿದ್ದ ಬೆಲೆಗಿಂತ ಹೆಚ್ಚು ಹಣವನ್ನೇ ರೈಲ್ವೆ ಇಲಾಖೆ ಕೊಟ್ಟು ಇಡೀ ವಸತಿ ಪ್ರದೇಶವನ್ನೇ ಖರೀದಿಸಿತ್ತು. ಇದು ಸಕ್ರಮವಾಗಿಲ್ಲವೆಂದು ನ್ಯಾಯಾಲಯದಲ್ಲಿ ಮೊಕದ್ದಮೆಯನ್ನೂ ಹೂಡಿಯಾಗಿತ್ತು. ಬಹು ವರ್ಷಗಳ ಕಾಲ ಎಮ್.ಟಿ.ಎಸ್. ಕಾಲೋನಿಯ ಕೇಸ್ ನಡೆದು ಇಲ್ಲಿಂದ ಅಧಿಕಾರಿಯೊಬ್ಬರು ಮುಂಬೈಗೆ ಹೋಗಿ ಕೋರ್ಟಿನಲ್ಲಿ ಹಾಜರಾಗುವುದು ನಡೆದಿತ್ತು. ಏನೂ ತೀರ್ಮಾನವಾಗದೇ ಕೇಸ್ ಮುಚ್ಚಿ ಹೋಯಿತಂತೆ.

ಕಾಲೋನಿಯನ್ನು ಕೊಂಡುಕೊಂಡ ಇಲಾಖೆಯು ತನ್ನ ಉದ್ಯೋಗಿಗಳಿಗೆ ಹಿರಿತನದ ಆಧಾರದ ಮೇಲೆ ವಸತಿ ಸೌಕರ್ಯವನ್ನು ಒದಗಿಸಲು ಪ್ರಾರಂಭಿಸಿತು. ಈಚಿನ ವರ್ಷಗಳಲ್ಲಿ ಕೆಲಸಕ್ಕೆ ಸೇರಿದ್ದ ನಾರಾಯಣ ಶಾಸ್ತ್ರಿ, ರಂಗರಾಜನ್ ಮತ್ತಿತರಿಗೆ

ಸೇವಾಹಿರಿತನದ ಪಟ್ಟಿಯಲ್ಲಿ ಸ್ಥಾನ ಇರಲಿಲ್ಲ; ಹೀಗಾಗಿ ಅಂಥವರಿಗೆ ಎಂ.ಟಿ.ಎಸ್. ಕಾಲೋನಿಯಲ್ಲಿ ಮನೆ ಸಿಕ್ಕುವುದು ತಡವಾಯಿತು. ಮನೆ ಸಿಕ್ಕಿದ್ದ ಹಿರಿಯ ಉದ್ಯೋಗಿಗಳಲ್ಲಿ ಕೆಲವರಿಗೆ ಕ್ವಾರ್ಟರ್ಸ್‌ಗೆ ಬರಲು ಇಚ್ಛೆಯಿರಲಿಲ್ಲ. ಅಂಥವರು ತಮಗೆ ದೊರೆತ ಮನೆಯನ್ನು ಕಿರಿಯ ಸಹೋದ್ಯೋಗಿಗಳಲ್ಲಿ ಯಾರು ಬೇಕಾದರು ಆಯ್ಕೆ ಮಾಡಿಕೊಂಡು ಹೋಗಿ ವಾಸಿಸಬಹುದೆಂದು ಹೇಳುತ್ತಿದ್ದರು. ಆದರೆ, ಇಂಥ ಅವಕಾಶ ದೊರೆತಾಗಲೆಲ್ಲ ನಾರಾಯಣ ಶಾಸ್ತ್ರಿ ಬೇಡವೆಂದು ನಿರಾಕರಿಸಿಬಿಡುತ್ತಿದ್ದರು. ಇನ್ನೊಬ್ಬರ ಹೆಸರಿನಲ್ಲಿ ಅನುಕೂಲ ಪಡೆದುಕೊಳ್ಳಲು ಶಾಸ್ತ್ರಿಗಳ ಸ್ವಾಭಿಮಾನ ಒಪ್ಪುತ್ತಿರಲಿಲ್ಲ. " ಇಲಾಖೆಯು ನನ್ನ ಹೆಸರಿಗೆ ಒಂದು ಮನೆಯನ್ನು ಪ್ರತ್ಯೇಕವಾಗಿ ನಿಗದಿಪಡಿಸಿ ಅಲ್ಲಿ ಹೋಗಿರು ಎಂದು ಹೇಳುವವರೆಗೂ ನಾನು ಬೇರೆ ಬಾಡಿಗೆ ಮನೆಯಲ್ಲೇ ಇರುತ್ತೇನೆ. ಯಾರ ಹೆಸರಿಗೋ ನಿಗದಿಯಾದ ಮನೆಯಲ್ಲಿ ಹೋಗಿರುವುದು ನಿಯಮಾನುಸಾರ ಸಮಂಜಸವಲ್ಲ, ನನ್ನ ಮನಸ್ಸಿಗೂ ಒಪ್ಪತಕ್ಕದ್ದಲ್ಲ. ಎಂದು ಖಡಾಖಂಡಿತವಾಗಿ ನಿರಾಕರಿಸುತ್ತಿದ್ದರು. ಅಂತೂ ೧೯೬೧ರ ವೇಳೆಗೆ ರಂಗರಾಜನ್‌ರಿಗೆ ಎಂ.ಟಿ.ಎಸ್. ಕಾಲೋನಿಯಲ್ಲಿ ಮನೆ ಸಿಕ್ಕುವ ಹೊತ್ತಿಗೆ ನಾರಾಯಣ ಶಾಸ್ತ್ರಿಯವರಿಗೂ ಅಲ್ಲಿ ಕ್ವಾರ್ಟರ್ಸ್ ನಿಗದಿಯಾಗಿ ಸ್ನೇಹಿತರಿಬ್ಬರೂ ಅಲ್ಲಿ ನೆರೆಹೊರೆಯಲ್ಲಿ ವಾಸಿಸುವಂತಾಯಿತು. ಶಾಸ್ತ್ರಿಗಳ ಕುಟುಂಬ ಅಲ್ಲಿ ಕಾಲೋನಿಗೆ ಬರುವ ವೇಳೆಗೆ ಅವರ ಮೊದಲ ಮಗ ಅನಂತಕುಮಾರ ಇನ್ನು ಒಂದೂವರೆ ವರ್ಷದ ಮಗು! ಮುಂದೆ ಶಾಸ್ತ್ರಿಯವರ ಕುಟುಂಬದಲ್ಲಿ ಸುವಾಸಿನಿ, ನಂದಕುಮಾರರು ಜನಿಸುವ ವೇಳೆಗೆ ಅವರ ವಾರಗೆಯ ಮಕ್ಕಳು ರಂಗರಾಜನ್ ಅವರ ಮನೆಯಲ್ಲಿ ಬೆಳೆಯತೊಡಗಿದ್ದರು.

ಎಂ.ಟಿ.ಎಸ್.ಕಾಲೋನಿಯದೇ ಒಂದು ವಿಶಿಷ್ಟವಾದ ಜಗತ್ತು! ವಸುದೈವ ಕುಟುಂಬಕಂ ಎಂಬ ಉಕ್ತಿ ಈ ಕಾಲೋನಿಗೆ ಅನ್ವಯಿಸುವ ಮಟ್ಟಿಗೆ ಮತ್ತೆಲ್ಲಿಗೂ ಹೊಂದಲಿಕ್ಕಿಲ್ಲ ಎನ್ನಬಹುದಾದಷ್ಟು ಸಾಮರಸ್ಯ. ಕಾಲೋನಿಯ ಸದಸ್ಯರಲ್ಲಿ ಯಾರ ಮನೆಗೆ ಯಾರು ಯಾವಾಗ ಬೇಕಾದರೂ ಹೋಗಿ ಬರಬಹುದಾದಷ್ಟು, ವಿಶ್ವಾಸ, ಸಲುಗೆ, ಸ್ವಾತಂತ್ರ್ಯ, ದಿನವಿಡೀ ಯಾರ ಮನೆಯ ಬಾಗಿಲೂ ಹಾಕಿರುತ್ತಲೇ ಇರಲಿಲ್ಲ. ಅದರಲ್ಲೂ ಶಾಸ್ತ್ರಿಯವರ ಮನೆಯೆಂದರೆ ಅಕ್ಷರಶ: ಎಲ್ಲರಿಗೂ ಸರ್ವದಾ ತೆರೆದ ಬಾಗಿಲು!

ಶಾಸ್ತ್ರಿ ದಂಪತಿ ದೈವ ಭಕ್ತರು. ಜೀವನಮೌಲ್ಯಗಳಲ್ಲಿ ಅಪಾರ ನಂಬಿಕೆಯುಳ್ಳವರು. ನಾರಾಯಣ ಶಾಸ್ತ್ರಿಯಂತೂ ಪೂಜೆಗೆ ಕುಳಿತರೆ ಆಯಿತು. ಸುದೀರ್ಘವಾಗಿ ಸಾಂಗವಾಗಿ ಪೂಜಾವಿಧಿ ನೆರವೇರುವುದು. ಆ ಹೊತ್ತಿನಲ್ಲಿ ಯಾರೇ ಅವರ ಮನೆಗೆ ಹೋದರೂ ಶಾಸ್ತ್ರಿಯವರ ಪೂಜೆಗೆ ಭಂಗಬಾರದು; ಅವರೇನೂ ಕುಳಿತಲ್ಲಿಂದ ಏಳುವುದಿಲ್ಲ. ರಂಗರಾಜನ್ ಅಂತ ಗೆಳೆಯರಿಗೆ ಈ ವಿಷಯ ಗೊತ್ತಿದ್ದುದರಿಂದ ಶಾಸ್ತ್ರಿಯನ್ನು ಈ ಹೊತ್ತಿನಲ್ಲಿ ಡಿಸ್ಟರ್ಬ್ ಮಾಡುವ ಹಾಗಿಲ್ಲ. ಆಮೇಲೆ ಭೇಟಿಮಾಡಿದರಾಯಿತು ಎಂದು ಹೊರಟುಬಿಡುವರು. ತಂದೆತಾಯಿಗಳ ಈ ಸಾತ್ತ್ವಿಕ ಸ್ವಭಾವವನ್ನು ಅವರ ಮಕ್ಕಳಲ್ಲಿಯೂ ಚಿಕ್ಕಂದಿನಿಂದಲೇ ಗುರುತಿಸಬಹುದಾಗಿತ್ತು. ರಂಗರಾಜನ್‌ರಂಥ ಹಿರಿಯರು ಆಗಾಗ್ಗೆ ತಮ್ಮ ಮನೆಗೆ ಬರುವ ಪರಿಚಿತರೇ ಆಗಿದ್ದರೂ ಮಕ್ಕಳು ಸಂಕೋಚ ಗೌರವಗಳಿಂದ ದೂರದಲ್ಲೇ ನಿಲ್ಲುವರು. ತಮ್ಮ ತಂದೆಗೆ ಸಲ್ಲಿಸುವಷ್ಟೇ ಗೌರವ, ವಿನಯಗಳಿಂದ ನಡೆದುಕೊಳ್ಳುವರು.

ರಂಗರಾಜನ್ ಮತ್ತು ನಾರಾಯಣ ಶಾಸ್ತ್ರಿಗಳಿಬ್ಬರೂ ರೈಲ್ವೆ ಇಲಾಖೆಯ ಅಕೌಂಟ್ಸ್ ಇಲಾಖೆ ಪರೀಕ್ಷೆಯಲ್ಲಿ ಅರ್ಹತೆ ಪಡೆದು ಅಕೌಂಟೆಂಟ್ ಹುದ್ದೆಗೆ ಬಡ್ತಿ ಪಡೆಯಲು ಅರ್ಹರಾಗಿದ್ದರು. ಮಾತ್ರವಲ್ಲ, ಮುಂದೆ ಶಾಸ್ತ್ರಿಗಳು ಐ ಎಸ್ ಎನ್ ಎಂಬ ಉನ್ನತ ಪರೀಕ್ಷೆಯೊಂದನ್ನೂ ಯಶಸ್ವಿಯಾಗಿ ಮುಗಿಸಿ ಇನ್ಸ್‌ಪೆಕ್ಟರ್ ಆಫ್ ಸ್ಟೋರ್ಸ್ ಹುದ್ದೆಗೇರಿ ಅದೇ ಹುದ್ದೆಯಲ್ಲಿ ನಿವೃತ್ತಿಪಡೆದರು.




**ಟಿ. ರಂಗರಾಜನ್ ದಂಪತಿ**

ಜ್ಯೋತಿಷ್ಯದಲ್ಲೂ ಶಾಸ್ತ್ರಿಯವರ ತಿಳುವಳಿಕೆ ಮೇಲ್ಮಟ್ಟದ್ದಾಗಿತ್ತು. ಆದರೆ, ತಾವು ಕಲಿತ ಜ್ಯೋತಿಷ್ಯವಿದ್ಯೆಯನ್ನು ಶಾಸ್ತ್ರಿಗಳು ವ್ಯಾವಹಾರಿಕವಾಗಿ ಬಳಸಲು ಎಂದೂ ಮುಂದಾಗಲಿಲ್ಲ. ತಮ್ಮ ಪರಿಚಿತ ವಲಯದಲ್ಲಿ ಯಾರಾದರೂ ತೊಂದರೆ ತಾಪತ್ರಯಗಳನ್ನು ಹೇಳಿಕೊಳ್ಳುವಾಗ, ಶಾಸ್ತ್ರಿಗಳು ಜ್ಯೋತಿಷ್ಯದ ರೀತ್ಯ ತಮಗೆ ತೋರಿದ ಪರಿಹಾರವನ್ನು ಹೇಳುತ್ತಿದ್ದರು. ರಂಗರಾಜರಂಥವರಿಗೆ ಜ್ಯೋತಿಷ್ಯದ ತಿಳುವಳಿಕೆ ಇರಲಿಲ್ಲ. ಆದರೆ, ಅವರ ಸಹೋದ್ಯೋಗಿಗಳಲ್ಲೊಬ್ಬರಾದ ವೆಂಕಟರಮಣ ಜೋಯಿಸರು ಶಾಸ್ತ್ರಿಗಳಂತೆ ಜ್ಯೋತಿಷ್ಯದಲ್ಲಿ ಜ್ಞಾನವುಳ್ಳವರು. ಅವರಿಬ್ಬರೂ ಜ್ಯೋತಿಷ್ಯ ಶಾಸ್ತ್ರದ ವಿಷಯವನ್ನು ಕುರಿತು ಒಮ್ಮೊಮ್ಮೆ ಸುದೀರ್ಘ ಚರ್ಚೆ ನಡೆಸುವುದಿತ್ತು. ಅಂಥ ಸಂದರ್ಭಗಳಲ್ಲಿ ಕೇಳುಗರಾಗಿದ್ದ ರಂಗರಾಜನ್ ಮತ್ತಿತರ ಗೆಳೆಯರಿಗೆ ಶಾಸ್ತ್ರಿಯವರ ತಿಳುವಳಿಕೆಯ ಅಗಾಧತೆಯ ಬಗೆಗೆ ಅಚ್ಚರಿ ಮೂಡುತ್ತಿತ್ತು. ತಾವು ಪಡೆದ ತಿಳುವಳಿಕೆಯ ಬಗೆಗೆ ನಾರಾಯಣ ಶಾಸ್ತ್ರಿಯವರಿಗೆ ಅತ್ಯಂತ ವಿಶ್ವಾಸವಿದ್ದುದು ಗಮನಾರ್ಹ. ನಾರಾಯಣ ಶಾಸ್ತ್ರಿಗಳ ಜ್ಯೋತಿಷ್ಯ ಪರಿಜ್ಞಾನವನ್ನು ಯಾವುದೋ ದೈವೀಶಕ್ತಿಯ ಅನುಗ್ರಹವೆಂದೇ ರಂಗರಾಜನ್ ಭಾವಿಸುತ್ತಾರೆ.

ಶಾಸ್ತ್ರಿಯವರಿಗೆ ಅನುಗ್ರಹಿಸಿರಬಹುದಾದ ದೇವಿಯೇ ಎಂ ಟಿ ಎಸ್ ಕಾಲೊನಿಯ ಸ್ತ್ರೀಸಮೂಹಕ್ಕೂ ಅಪಾರ ಪ್ರೇರಣೆಯನ್ನು ನೀಡಿದ್ದಿರಬೇಕು. ಶಾಸ್ತ್ರಿಯವರ ಪತ್ನಿ ಗಿರಿಜಾ ಕಾಲೋನಿಯಲ್ಲಿ ದೇವಿಗ್ರೂಪ್ ಎಂಬ ಸಂಘಟನೆಯನ್ನೇ ಪ್ರಾರಂಭಿಸಿದ್ದರು. ಪ್ರತಿವರ್ಷದ ನವರಾತ್ರಿಯಲ್ಲಿ ಈ ದೇವಿಸಮೂಹದ ಚಟುವಟಿಕೆ, ಪೂಜಾವಿಧಿಗಳು ಬಹುವೈಭವದಿಂದ ಜರುಗುತ್ತಿದ್ದವು. ಈ ಗುಂಪಿನ ನಾಯಕತ್ವ ಗಿರಿಜಾರವರದೇ. ಅವರೊಡನೆ ಪೂಜಾವಿಧಿಯ ನೇತೃತ್ವ ವಹಿಸುತ್ತಿದ್ದ ಸರಸ್ವತೀ ಎಂಬ ಗೃಹಿಣಿ ಒಳ್ಳೆಯ ಹಾಡುಗಾರ್ತಿಯಾಗಿದ್ದರೆ, ಸೀತಾಲಕ್ಷ್ಮಿ ಎಂಬ ಮಹಿಳೆ ವಯೊಲಿನ್ ವಾದ್ಯನುಡಿಸುವುದರಲ್ಲಿ ಪರಿಣತಿಪಡೆದಿದ್ದರು. ಈ ಲಕ್ಷ್ಮಿ ಸರಸ್ವತಿ ಪಾರ್ವತಿ(ಗಿರಿಜೆ)ಯರು ಕೂಡಿ ದೇವಿಗ್ರೂಪ್ ಸಂಘಟನೆಗೆ ಶೋಭೆ ತಂದಿದ್ದರು. ಕಾರ್ಯಕ್ರಮ ನಡೆಸುವುದರಿಂದ ಹಿಡಿದು ಬಂದವರಿಗೆ ಅರಿಶಿಣ ಕುಂಕುಮ ಕೊಡುವವರೆಗೂ ಅಚ್ಚುಕಟ್ಟಾದ ವ್ಯವಸ್ಥೆ.

ಮುಂದಿನ ಪುಟಕ್ಕೆ



ಅನಂತ ನಮನ

ಗಿರಿಜೆ ತಪಸಿನ ಹರಕೆ
ನಾಡ ಪುಣ್ಯದ ಬಂತುಕೆ
ಅನಂತದಾಕಾಶ —
ದೊಂದು ಮಿಂಚುಮಣಿ!
ಬಾನು ತೋರಿದ ದಾರಿ
ದಾರಿ ಉದ್ದಕೂ ಶಿಖರ
ಸಾಲು ಸಾಲು ಸವಾಲು
ಏರಿದೆಂಥ ಪರಿ ?
ದಾನ ಚಿಂತಾಮಣಿಯ
ಅನ್ನದಕ್ಷಯ ಪಾತ್ರೆ
ತೇಜ ತೇಜಸ್ವಿನಿ ಜೋಡು
ಕನಸುಗಂಗಳ ಯಾತ್ರೆ.
ಮುಟ್ಟಿದ್ದೆಲ್ಲವೂ ಚಿನ್ನ
ಮುಗುಳು ನಗೆ ಚೆನ್ನ!
ಗೀತೆ ಸಾಲಿನ ಓದು
ಏಳುವಡೆತಡ, ಓದು
ದೇಶ, ಕಾಲದ ಸುತ್ತು
ಸಕಲ ಜೀವರ ಕ್ಷೇಮ-
ದೊಂದೇ ಗುರಿಕಾರ.
ಎಷ್ಟು ಕ್ಷಣ, ಎಷ್ಟು ದಿನ —
ವೇಣಿ ಗೆದ್ದವರಾರು ?
ಇದ್ದಷ್ಟೇ ಕಾಲ, ಮುಗಿಲ ಮುಟ್ಟಿದರು !
ಈಸಿದ್ದು ಅವರೇ, ಜಯಿಸಿದ್ದು ಅವರೇ, ಅರೆ!
ಎಂಥ ಅಪರೂಪದವರು !

— ಕವಿ ನರಸಿಂಹ. ಪರಾಂಜಪೆ.
ಧಾರವಾಡ.

ಧಾರವಾಡ
16-11-2018.

ಕ್ರಿಯಾಶೀಲ ಕೇಂದ್ರಮಂತ್ರಿ ಎಚ್.ಎನ್. ಅನಂತಕುಮಾರ ಇತ್ತೀಚೆಗೆ ಅಕಸ್ಮಾತ್ತಾಗಿ ನಮ್ಮನ್ನಗಲಿದಾಗ ಅವರಿಗರ್ಪಿಸಿದ ಶ್ರದ್ಧಾಂಜಲಿ ಕವನ.

**ಸಾಹಿತ್ಯ:** ನರಸಿಂಹ ಪರಾಂಜಪೆ **ಗಾಯನ:** ಡಾ ಪದ್ಮಿನಿ ಓಕ್
**ಸಂಗೀತ:** ಶ್ರೀ ಮಾರುತಿ ಮಿರಜ್ಕರ್

ಯುಟ್ಯೂಬ್ ಲಿಂಕ್ https://youtu.be/UZdiwjSFy-g ಮೂಲಕ ಈ ಹಾಡನ್ನು ಕೇಳಬಹುದು



ವಿದ್ಯಾರ್ಥಿಯಾಗಿದ್ದಾಗ ನಾರಾಯಣ ಶಾಸ್ತ್ರಿಯವರು ಅವಕಾಶ ದೊರೆತಾಗಲೆಲ್ಲ ಕುಕ್ಕರಹಳ್ಳಿ ಕೆರೆಗೆ ಹೋಗಿ ಈಜುವ ಹವ್ಯಾಸ ರೂಢಿಮಾಡಿಕೊಂಡಿದ್ದರಂತೆ. ಹೀಗೊಮ್ಮೆ ಈಜುಮುಗಿಸಿ ನೀರಿನಿಂದ ಹೊರಬರುವ ಹೊತ್ತಿಗೆ ಅಲ್ಲಿಗೆ ವಿದೇಶೀಯನೊಬ್ಬ ನಡೆದು ಬಂದ. ಅವನು ಶಾಸ್ತ್ರಿಯವರ ಅಂಗಸೌಷ್ಠವವನ್ನು ನೋಡಿ ಸಂತೋಷಪಟ್ಟು ಅವರದೊಂದು ಚಿತ್ರ ತೆಗೆದುಕೊಟ್ಟ. ಕೆಲವರ್ಷಗಳ ನಂತರ ಶಾಸ್ತ್ರಿಯವರನ್ನು ವಿವಾಹವಾದ ಶ್ರೀಮತಿ ಗಿರಿಜಾರವರು ಈ ಚಿತ್ರವನ್ನು ನೋಡಿ ಕಂಡವರ ದೃಷ್ಟಿ ತಾಗಬಾರದೆಂದು ಚಿತ್ರವನ್ನು ಜೋಪಾನವಾಗಿ ತೆಗೆದಿಟ್ಟುಬಿಟ್ಟಿದ್ದರಂತೆ!

ಪುಟ ೪ ರಿಂದ ಸಂಘಟನಾ ಶಕ್ತಿ ಎನ್ನುವಾಗ ಕಾಲೊನಿಯವರೆಲ್ಲ ಗಿರಿಜಾ ಶಾಸ್ತ್ರಿಯವರನ್ನು ನೆನಪಿಸಿಕೊಳ್ಳುವುದು ಅನಿವಾರ್ಯ. ಯಾವುದೇ ಕಾರ್ಯಕ್ರಮವಿರಲಿ, ಯಾವುದೇ ಸಮಸ್ಯೆಯಿರಲಿ ಅಲ್ಲಿ ನೆರವಿಗೆ ಗಿರಿಜಾರವರು ಸಿದ್ಧ. ಕಾಲೊನಿಯ ಅವಶ್ಯಕತೆಗಳಿಗೆ ಸಂಬಂಧಿಸಿದಂತೆ ಮೇಲಧಿಕಾರಿಯ ಗಮನ ಸೆಳೆಯಬೇಕಾಗುವ ಅನಿವಾರ್ಯತೆ ಒಮ್ಮೊಮ್ಮೆ ಒದಗುತ್ತಿತ್ತು. ಮೇಲಧಿಕಾರಿ ಎಂದರೆ ರೈಲ್ವೇ ಇಲಾಖೆಯ ಡಿವಿಷನಲ್ ಸೂಪರಿಂಟೆಂಡೆಂಟ್. ಅಂಥ ಉನ್ನತ ಅಧಿಕಾರಿಯನ್ನು ನೋಡಹೋಗುವುದೆಂದರೆ ಕಾಲೊನಿಯ ನಿವಾಸಿಗಳಾದ ಕೆಳಹಂತದ ಉದ್ಯೋಗಿಗಳು ಹಿಂಜರಿಯುವುದು ಸಾಮಾನ್ಯ. ಆದರೆ ಗಿರಿಜಾ ಯಾವುದೇ ಹಿಂಜರಿಕೆಯಲ್ಲದೆಯೇ ಉನ್ನತ ಅಧಿಕಾರಿಗಳ ಕಚೇರಿಗೆ ನೇರವಾಗಿ ತೆರಳಿ ತಮ್ಮ ಕಾಲೊನಿಯ ಅಗತ್ಯದ ಬಗೆಗೆ ಅವರ ಗಮನ ಸೆಳೆದು ಸೂಕ್ತ ಕ್ರಮಕ್ಕೆ ಏರ್ಪಾಡು ಮಾಡಿಸಿಯೇ ಬಿಡುತ್ತಿದ್ದರು.

ಜಯಪ್ರಕಾಶ್ ನಾರಾಯಣರ ಆಂದೋಲನ ಶುರುವಾದ ಮೇಲೆ ಗಿರಿಜಾ ಶಾಸ್ತ್ರಿಯವರ ಹುರುಪು ಮತ್ತಷ್ಟು ಹೆಚ್ಚಿತು. ಜಯಪ್ರಕಾಶರ ಸ್ಫೂರ್ತಿಯಿಂದ ಗಿರಿಜಾರವರು ಗ್ರಾಮಾಂತರ ಪ್ರದೇಶಗಳಲ್ಲೂ ಸಂಚರಿಸುತ್ತ ಮಹಿಳೆಯರಲ್ಲಿ ಹುರುಪು ತುಂಬತೊಡಗಿದ್ದರು. ತಾವು ಕಲಿತ ಕುಶಲಕಲೆಗಳನ್ನೇ ಬಳಸಿ ಸ್ವಾವಲಂಬನೆಯನ್ನು ಹೇಗೆ ಸಾಧಿಸಬಹುದು ಎಂಬುದನ್ನು ಮಹಿಳೆಯರಿಗೆ ಮನವರಿಕೆ ಮಾಡಿಕೊಡುತ್ತಿದ್ದರು. ಹುಬ್ಬಳ್ಳಿ ಸಮೀಪದ ನಾಗಶೆಟ್ಟಿಕೊಪ್ಪ ಎಂಬ ಗ್ರಾಮವನ್ನುದತ್ತುತೆಗೆದುಕೊಂಡು ಅಲ್ಲಿ ಸುಧಾರಣಾಕ್ರಮಗಳನ್ನು ವ್ಯವಸ್ಥೆಗೊಳಿಸಲು ದುಡಿದ ಪರಿ ಸ್ಮರಣೀಯ. ಹುಬ್ಬಳ್ಳಿಯಿಂದ ಆ ಗ್ರಾಮದೆಡೆಗೆ ಹೋಗುವ ರಸ್ತೆಗೆ ಗಿರಿಜಾ ಶಾಸ್ತ್ರಿ ರಸ್ತೆ ಎಂದು ನಾಮಕರಣ ಮಾಡಿರುವುದು ಗಿರಿಜಾರವರ ದುಡಿಮೆಗೆ ನಾಡಿನ ಕೃತಜ್ಞತೆ ಸಂದ ಪರಿ. ಸಂಘಟನಾ ಸಾಮರ್ಥ್ಯ, ಮಾತಿನ ಕೌಶಲ, ಸಾಂದರ್ಭಿಕ ಕಾರ್ಯತತ್ಪರತೆ, ಪರಿಣಾಮಕಾರಿ ಅನುಷ್ಠಾನ- ಇವೆಲ್ಲ ಗುಣಾತ್ಮಕ ಅಂಶಗಳು ತಮ್ಮ ತಾಯಿಯಿಂದ ಅನಂತಕುಮಾರರಿಗೆ ಬಂದ ಬಳುವಳಿಯೇ ನಿಜ.

ಎಂ ಟಿ ಎಸ್ ಕಾಲೊನಿಯ ನಡುವೆ ದೊಡ್ಡದೊಂದು ಬಯಲು. ಅದರ ಮಧ್ಯೆ ಎತ್ತರವಾದ ಒಂದು ಹರವಿನ ಜಾಗ ಸಭೆ ನಡೆಸಲು ಲಾಯಕ್ಕಾದ ವೇದಿಕೆಯಾಗಿತ್ತು. ಕಾಲೊನಿಯವರೆಲ್ಲ ಸೇರಿ ವರ್ಷದಲ್ಲಿ ಎರಡು ಸಲ ಅಂದರೆ ಜನವರಿ ೨೬ ಮತ್ತು ಆಗಸ್ಟ್ ೧೫ ಈ ದಿನಗಳ ರಾಷ್ಟ್ರೀಯ ಹಬ್ಬಗಳನ್ನು ಇಲ್ಲಿ ಸಾಮೂಹಿಕವಾಗಿ ಆಚರಿಸುತ್ತಿದ್ದರು. ಇನ್ನು ದೇವಿ ಗ್ರೂಪ್‌ನ ನವರಾತ್ರಿ ಆಚರಣೆ. ಇವೆಲ್ಲಕ್ಕೆ ಕಳಸವಿಟ್ಟಂತೆ ಶುರುವಾದದ್ದು ರಾಮನವಮಿ ಉತ್ಸವ.

ಸ್ವಾತಂತ್ರ್ಯ ಬರುವ ಮೊದಲು ಬ್ರಿಟಿಷರು ಹುಬ್ಬಳ್ಳಿಯಲ್ಲಿ ರೈಲ್ವೇ ವರ್ಕ್‌ಶಾಪ್ ಪ್ರಾರಂಭಿಸಿದ್ದರು. ಆಗ ವಿದೇಶೀಯ ಅಧಿಕಾರಿಗಳಿಗಾಗಿ ಆಂಗ್ಲೋ ಇಂಡಿಯನ್ ಇನ್ಸ್‌ಟಿಟ್ಯೂಟ್ ಎಂಬುದು ಒಂದು ಕಟ್ಟಡದಲ್ಲೂ ಭಾರತೀಯ ಉದ್ಯೋಗಿಗಳಿಗಾಗಿ ಇಂಡಿಯನ್ ಇನ್ಸ್‌ಟಿಟ್ಯೂಟ್ ಎಂಬ ಸಂಘವು ಇನ್ನೊಂದು ಕಟ್ಟಡದಲ್ಲೂ ಚಟುವಟಿಕೆ ನಡೆಸಿಕೊಂಡಿದ್ದವು. ದೇಶಕ್ಕೆ ಸ್ವಾತಂತ್ರ್ಯ ಬಂದು ಬ್ರಿಟಿಷರು ಹೊರಟುಹೋದಮೇಲೆ ಎರಡೂ ಸಂಘಗಳ ಹೆಸರು ಬದಲಿಸಿ ನಾರ್ತ್ ಇನ್ಸ್‌ಟಿಟ್ಯೂಟ್ ಹಾಗೂ ಸೌತ್ ಇನ್ಸ್‌ಟಿಟ್ಯೂಟ್ ಎಂದು ನಾಮಕರಣ ಮಾಡಲಾಯಿತು. ೧೯೫೦ರ ಪ್ರಾರಂಭದಲ್ಲಿ ಪಿ. ಕೃಷ್ಣಮೂರ್ತಿ ಎಂಬ ಮಹಾಶಯರು ಶ್ರೀರಾಮ ಪರಿವಾರದ ದೊಡ್ಡದೊಂದು ಚಿತ್ರಕ್ಕೆ ಕಟ್ಟುಹಾಕಿಸಿ ತಂದು ಸೌತ್ ಇನ್ಸ್‌ಟಿಟ್ಯೂಟ್ ಕಟ್ಟಡದಲ್ಲಿ ಇರಿಸಿದರು. ಪ್ರತಿವರ್ಷ ರಾಮನವಮಿಯ ಸಂದರ್ಭದಲ್ಲಿ ಕೆಲವು ದಿನ ವಿಶೇಷ ಪೂಜೆ ಪುನಸ್ಕಾರಗಳನ್ನು ನಡೆಸಿದರು. ಮುಂದೆ ರೈಲ್ವೆ ಇಲಾಖೆಯ ವಿವಿಧ ವಿಭಾಗಗಳ ಉದ್ಯೋಗಿಗಳು ಕಾಲೊನಿಯಲ್ಲಿ ವಸತಿ ಹೂಡಿದ ಮೇಲೆ ರಾಮನವಮಿಯ ಕಾರ್ಯಕ್ರಮಗಳು ಇಲ್ಲಿಗೆ ವರ್ಗಾವಣೆಗೊಂಡವು.

೧೯೫೫ರ ನಂತರ ಈ ಕಾರ್ಯಕ್ರಮ ವಿಶೇಷರೂಪಪಡೆದು ನಾಡಿನಾದ್ಯಂತ ಪ್ರಸಿದ್ಧಿಪಡೆಯುವಂತಾಯಿತು. ತಮಿಳರೇ ಬಹುಸಂಖ್ಯೆಯಲ್ಲಿದ್ದ ರೈಲ್ವೆ ಉದ್ಯೋಗಿ ಬಳಗದಲ್ಲಿ ರಾಮನವಮಿ ಕಾರ್ಯಕ್ರಮದ ಬಗೆಗೆ ಅಪಸ್ವರವೂ ಬಾರದಿರಲಿಲ್ಲ. ಡಿಎಂಕೆ ಪ್ರಭಾವದಿಂದ ಪೀಡಿತರಾಗಿದ್ದ ಹಲವರು ತಮಿಳರು ಮರೆಯಲ್ಲಿ ಬಚ್ಚಿಟ್ಟುಕೊಂಡು "ವಾಲಿಯನ್ನು ಕೊಂದ ರಾಮನ ಕೊಂಡಾಟ ಎಷ್ಟರಮಟ್ಟಿಗೆ ಸರಿ?" ಎಂದು ಕೂಗೆಬ್ಬಿಸಿದರು. ಮುಗ್ಧರಾದ ಹುಬ್ಬಳ್ಳಿಯ ಜನತೆಗೆ ಇವರ ವರ್ತನೆ ವಿಚಿತ್ರವಾಗಿ ಕಂಡಿತು. ಅವರ್‍ಯಾರಿಗೂ ಈ ಅಪವಾದ ಅರ್ಥವೂ ಆಗಲಿಲ್ಲ; ಯಾರೂ ತಲೆಕೆಡಿಸಿಕೊಳ್ಳಲೂ ಇಲ್ಲ.

ಈ ತಮಿಳರ ಅಪಸ್ವರಕ್ಕೆ ವಿರುದ್ಧವಾಗಿ ಕಾಲೊನಿಯ ರಾಮನವಮಿ ಆಚರಣೆಗಳಲ್ಲಿ ಸರ್ವಧರ್ಮೀಯರ ಪಾಲೂ ಇತ್ತು. ಶಾಸ್ತ್ರಿಗಳ ಸಹೋದ್ಯೋಗಿ ಮುಸ್ಲಿಮನೊಬ್ಬ ಹನುಮಂತನ ಕಟ್ಟಾಭಕ್ತ. ಪ್ರತಿ ಅಮಾವಾಸ್ಯೆಗೆ ಹನುಮನ ಗುಡಿಗೆ ಹೋಗುತ್ತಿದ್ದ ಆತ ಹನುಮಂತನ ಬಗೆಗೆ ಅನೇಕ ಹಿಂದೂಗಳಿಗಿಂತಲೂ ಚೆನ್ನಾಗಿ ತಿಳಿದುಕೊಂಡಿದ್ದ. ಕಾಲೊನಿಯಲ್ಲಿದ್ದ ಮುಸ್ಲಿಂ ಕುಟುಂಬವೊಂದು ರಾಮಾಯಣದ ಬಗೆಗೆ ಅಪಾರ ಆಸಕ್ತಿಹೊಂದಿತ್ತು. ವೇಷಸ್ಪರ್ಧೆಯಲ್ಲಿ ಅವರ ಮನೆಹುಡುಗನಿಗೆ ರಾಮನ ಪಾತ್ರ ಹಾಕಿ ಮೆರೆಸುತ್ತಿದ್ದರು. ರಾಮನವಮಿಯ ಅನ್ನದಾನಕ್ಕೆ ಬೇಕಾಗುವಷ್ಟು ಸೌದೆಯನ್ನು ಉಚಿತವಾಗಿ ಪೂರೈಸುತ್ತಿದ್ದವನೂ ಒಬ್ಬ ಮುಸಲ್ಮಾನನೇ! ರಾಮನವಮಿಯ ಮಂಟಪವನ್ನು ಕಟ್ಟಿ ಸಜ್ಜುಗೊಳಿಸುತ್ತಿದ್ದವನು ಕ್ರೈಸ್ತ ಸಹೋದ್ಯೋಗಿ!!

ಇವೆಲ್ಲ ಧಾರ್ಮಿಕ ಕಾರ್ಯಕ್ರಮಗಳಲ್ಲಿ ನಾರಾಯಣ ಶಾಸ್ತ್ರಿಯವರೂ ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದರು. ಆದರೆ ರಾಜಕೀಯ, ಸಾಮಾಜಿಕ ಚಟುವಟಿಕೆಗಳಲ್ಲಿ ಅವರು ನಿರಾಸಕ್ತರೇ. ಅವೆಲ್ಲವನ್ನೂ ತಮ್ಮ ಪತ್ನಿಗೆ ವಹಿಸಿಕೊಟ್ಟು ನಿಶ್ಚಿಂತರಾದಂತಿತ್ತು. ಇತರ ಚಟುವಟಿಕೆಗಳು ಹಾಗಿರಲಿ, ಶಾಸ್ತ್ರಿಗಳ ಸ್ನೇಹವಲಯವೂ ತೀರಾ ಸೀಮಿತವಾಗಿತ್ತು. ಸ್ನೇಹಿತರ ಸಂಖ್ಯೆಯೂ ಕೈಬೆರಳೆಣಿಕೆ ಮೀರದಷ್ಟು ಮಾತ್ರವೇ. ಉಳಿದಂತೆ ತಾವಾಯಿತು, ತಮ್ಮ ಕುಟುಂಬ, ತಮ್ಮ ಕೆಲಸ ಅಷ್ಟಕ್ಕೆ ಸೀಮಿತ.

ಕಾರಣಾಂತರಗಳಿಂದಾಗಿ ಶಾಸ್ತ್ರಿಗಳೂ ರಂಗರಾಜನ್ ಅವರೂ ಕಾಲೊನಿಯಿಂದ ತಮ್ಮ ವಾಸ್ತವ್ಯವನ್ನು ಬದಲಿಸಬೇಕಾಗಿ ಬಂದರೂ ಅವರ ಗೆಳೆತನ ಸ್ಥಿರವಾಗಿಯೇ ಉಳಿಯಿತು. ನಿವೃತ್ತಿಹೊಂದಿದ ನಂತರವೂ ಅವರು ಪರಸ್ಪರ ಭೇಟಿಯಾಗುತ್ತಲೇ ಇರುವರು. ಹುಬ್ಬಳ್ಳಿಯಲ್ಲಿದಷ್ಟು ಕಾಲ ಶಾಸ್ತ್ರಿಗಳು ಸೈಕಲ್ ಏರಿ ನಿಗದಿತ ವೇಳೆಗೆ ರಂಗರಾಜನ್ ಮನೆಗೆ ಬರುವರು. ಅವರು ಬಾರದ ದಿನ ರಂಗರಾಜನ್ ಶಾಸ್ತ್ರಿಗಳ ಮನೆಗೆ ಹೋಗುವರು. ಗಂಟೆಗಟ್ಟಲೆ ಸಾಗುತ್ತಿದ್ದ ಅವರ ಮಾತುಕತೆಯಲ್ಲಿ ರಾಜಕೀಯಕ್ಕಾಗಲಿ ಒಣಹರಟೆಗಾಗಲಿ ಅವಕಾಶವಿರುತ್ತಿರಲಿಲ್ಲ. ಧಾರ್ಮಿಕ ವಿಷಯಗಳೇ ಬಹುಪಾಲು ಅವರ ಮಾತುಕತೆಯ ವಿಷಯ. ಶೈವ-ವೈಷ್ಣವ ತತ್ತ್ವಗಳಂಥ ವಿಷಯಗಳು ಅವರ ಚರ್ಚೆಯ ವಸ್ತು.

ಒಮ್ಮೆ ಅನಂತಕುಮಾರ ಶಾಸ್ತ್ರಿಯವರನ್ನು ವಿದೇಶಪ್ರವಾಸಕ್ಕೂ ಕರೆದುಕೊಂಡು ಹೋಗಿಬಂದಿದ್ದರು. ಏನಪ್ಪಾ, ಅಮೆರಿಕಾ ಯೂರೋಪ್ ಎಲ್ಲಾ ಸುತ್ತಿಕೊಂಡು ಬಂದಿದ್ದೀಯಾ, ಇನ್ನೇನು ಕಡಿಮೆ ಎಂದು ರಂಗರಾಜನ್ ಗೆಳೆಯನನ್ನು ಹಾಸ್ಯಮಾಡುವಾಗ ಶಾಸ್ತ್ರಿಯವರು ಗಂಭೀರವಾಗಿ ಯಾವ ದೇಶಕ್ಕೆ ಹೋದರೇನು, ನಮ್ಮ ಭಾರತದ ಮುಂದೆ ಅವೆಲ್ಲ ಶೂನ್ಯ ಎಂದುಬಿಟ್ಟರು!

ಗಿರಿಜಾ ಶಾಸ್ತ್ರಿಯವರ ನಿಧನದ ನಂತರದ ದಿನಗಳಲ್ಲಿ, ಅನಂತಕುಮಾರ್ ಬೆಂಗಳೂರಿನ ವೈಯಾಳಿಕಾವಲಿನಲ್ಲಿ ಮನೆಮಾಡಿದ್ದಾಗ ಶಾಸ್ತ್ರಿಗಳು ಕೆಲವು ದಿನ ಅಲ್ಲೂ ಇರುತ್ತಿದ್ದರು. ಆಗಾಗ ಹುಬ್ಬಳ್ಳಿಗೆ ಬಂದು ಇಂದಿರಾನಗರದಲ್ಲಿ ತಾವು ಕಟ್ಟಿಸಿದ ಮನೆಯಲ್ಲಿ ಕಿರಿಯ ಮಗ ನಂದಕುಮಾರನೊಡನೆ ಇರುತ್ತಿದ್ದರು. ಹೀಗೆ ಹುಬ್ಬಳ್ಳಿಗೆ ಬಂದಿದ್ದಾಗ ಒಮ್ಮೆ ಶಾಸ್ತ್ರಿಗಳು ತಮ್ಮ ಗೆಳೆಯನಿಗೆ ಬರುವಂತೆ ಹೇಳಿಕಳುಹಿಸಿದರು. ಅಂದು ಬೆಳಗ್ಗೆಯೇ ರಂಗರಾಜನ್ ಶಾಸ್ತ್ರಿಯವರ ಭೇಟಿಗೆ ಹೋದರು.ಕಾರಣ ಕೇಳಿದಾಗ ಶಾಸ್ತ್ರಿಯವರು, ಏನೂ ಇಲ್ಲ. ಸುಮ್ಮನೆ ನಿನ್ನನ್ನು ನೋಡೋಣ ಎನ್ನಿಸಿತು. ಕುಳಿತುಕೋ, ಎಂದರು. ಸರಿ. ಆ ಮಾತು ಈ ಮಾತು ತೊಡಗಿಯಾಯಿತು. ನಡುನಡುವೆ ತಿಂಡಿ ಪಾನೀಯಗಳ ವಿತರಣೆ ಇದ್ದದ್ದೇ. ಮಧ್ಯಾಹ್ನವಾಯಿತು, ಏಳೋಣವೆನ್ನುವಷ್ಟರಲ್ಲಿ ಊಟದ ಹೊತ್ತಿಗೆ ಹೊರಟುಬಿಡುವುದೇ ಎಂದು ತಡೆದದ್ದಾಯಿತು. ಸಂಜೆಯ ಫಲಾಹಾರ ಮುಗಿಯುವವರೆಗೂ ಗೆಳೆಯರ ಸಂಭಾಷಣೆ ಮುಂದುವರಿಯಿತು. ತಡವಾಯಿತು, ಇನ್ನು ಹೊರಡೋಣ ಎಂದು ರಂಗರಾಜನ್ ಎದ್ದರು. ಏನೋ ನಿನ್ನ ಜೊತೆ ಮಾತನಾಡಿದ ಹಾಗೇ ಆಗಲಿಲ್ಲ, ಇನ್ನೂ ಸ್ವಲ್ಪ ಹೊತ್ತು ಇರಬಹುದಾಗಿತ್ತು, ಹೊರಟುಬಿಟ್ಟೆಯಲ್ಲ ಎಂದು ಶಾಸ್ತ್ರಿಗಳು ಭಾರವಾದ ಧ್ವನಿಯಲ್ಲಿ ಹೇಳಿದರು. ಬೆಳಗಿನಿಂದ ಇಲ್ಲೇಇದ್ದೆನಲ್ಲ, ನೋಡಬೇಕು ಎಂದರೆ ಎಷ್ಟು ದೂರ ಬರಬೇಕು, ಯಾವಾಗ ಬೇಕಾದರೂ ಬಂದು ನೋಡಿ ಮಾತಾಡಬಹುದಲ್ಲ ಎಂದು ಸಮಾಧಾನ ಹೇಳಿ ರಂಗರಾಜನ್ ಹೊರಟರು.

ಆದರೆ, ತಮ್ಮ ಗೆಳೆಯನ ಭೇಟಿ ಅದೇ ಕೊನೆಯಾದೀತೆಂದು ರಂಗರಾಜನ್ ಊಹಿಸಿರಲಿಲ್ಲ. ಬೆಂಗಳೂರಿಗೆ ಹಿಂತಿರುಗಿದ ಶಾಸ್ತ್ರಿಗಳು ನಿಧನರಾದ ವರ್ತಮಾನ ತಲುಪಿದಾಗ ಅವರಿಗೆ ಆಘಾತವಾಯಿತು. ಆಪ್ತಗೆಳೆಯನೊಡನೆ ಒಂದು ದಿನವಿಡೀ ಕಳೆಯಬಯಸಿದ ಶಾಸ್ತ್ರಿಗಳ ಜ್ಯೋತಿಷ್ಯಪ್ರಜ್ಞೆ ಸನಿಹದ ತನ್ನ ಅಂತ್ಯವನ್ನು ಮೊದಲಿಗೇ ತಿಳಿದು ಕೊಂಡಿತ್ತೇ ಎಂಬುದು ರಂಗರಾಜನ್ ಊಹೆಗೆ ನಿಲುಕುವುದು ಕಷ್ಟಸಾಧ್ಯವಾಗಿತ್ತು.

*

ಅನಂತ ತರಂಗ


# ‘ಅಂವ ಮಂತ್ರಿ ಆಗೋದು ಖರೆ’

ನಾಳೆ ಅಂವಾ ದೊಡ್ಡ ರಾಜಕಾರಣಿ ಆಗ್ತಾನ, ಅಂವಮಂತ್ರಿ ಆಗೋದು ಖರೆ

ಎಂ ಟಿ ಎಸ್ ಕಾಲೊನಿಯ ಮಕ್ಬೂಲ್ ಪಟೇಲನ ತಾಯಿ ಹೇಳುತ್ತಿದ್ದ ಭವಿಷ್ಯವಾಣಿಯಿದು. ಜ್ಯೋತಿಷ್ಯವನ್ನೇನೂ ಅರಿಯದ ಆ ಗೃಹಿಣಿ ಈ ಮಾತು ಹೇಳುತ್ತಿದ್ದುದು ಅನಂತಕುಮಾರನ ಬಗೆಗೆ. ಆಕೆಗೆ ಅಂಥದೊಂದು ಗ್ರಹಿಕೆ ಮೂಡಲು ಪ್ರಬಲ ಕಾರಣವೇನೂ ಇರಲಿಕ್ಕಿಲ್ಲ. ಅನಂತಕುಮಾರ ಆಕೆಯ ಮಗ ಮಕ್ಬೂಲನ ಜೊತೆಗಾರ. ಎಂ ಟಿ ಎಸ್ ಕಾಲೊನಿಯ ಸಹವಾಸಿ. ಒಂದು ದಿನವೂ ತಪ್ಪದಂತೆ ದಿನನಿತ್ಯ ಸಂಜೆ ಆಕೆಯೆದುರು ಅಧಿಕೃತವಾಗಿಯೋ ಎಂಬಂತೆ ಅನಂತಕುಮಾರ ಕಾಣಿಸಿಕೊಳ್ಳುವನು. ಆ ಸಂದರ್ಭದಲ್ಲಿ ಮಕ್ಬೂಲನ ತಾಯಿಯ ಮಾತು ಹೀಗೆ ಸಾಗುತ್ತಿತ್ತು:

ನಿಮ್ಗೇನು ಓದುಬರಹ ಒಂದೂ ಇಲ್ಲೇನು, ಸಾಲಿಮುಗಿಸಿಬಂದು ಇನ್ನೂಮನಿಯೊಳಗ ಕಾಲಿಟ್ಟಿಲ್ಲ, ಆಗಲೇ ಕುಣೀಲಿಕ್ಕಹೊರಟು ನಿಂತೀರಿ. ನಿಮಗ ಎಷ್ಟು ಸಲ ಹೇಳೂದು, ಸಾಲಿ ಮುಗಿಸಿ ಬಂದು ಒಂದು ಹತ್ತು ಮಿನಿಟು ಕುಂತು ಓದೂದು ಬರಿಯೋದು ಏನದ ನೋಡ್ರಿ. ಆಮ್ಯಾಲ ಆಟ ಮತ್ತೊಂದಂತ. ನೀನಂತು ನನ್ನ ಮಾತ ಕೇಳಾಂವ ಅಲ್ಲ, ನಿನ್ನ ನೋಡಿ ಮಕ್ಬೂಲನೂ ಆಟದೊಳಗೇ ಇರ್ತಾನ.

ಆಕೆ ತಲೆಯೆತ್ತಿ ಹುಡುಗರತ್ತ ಕಣ್ಣು ಹಾಯಿಸಿದಳು ಅವಳ ಕಣ್ಣೆದುರು ಅನಂತಕುಮಾರನೊಬ್ಬನೇ ನಿಂತಿದ್ದ. ತನ್ನ ಟೀಕಾಸ್ತ್ರಗಳು ತಾಗಿಯೇ ಇಲ್ಲದವನಂತೆ ಮುಗುಳುನಗುತ್ತ ನಿಂತಿದ್ದ. ತಾಯಿಯ ಎದುರು ನಿಲ್ಲಲಾರದೆ ಮಕ್ಬೂಲ ಹೊರ ಅಂಗಳದಲ್ಲಿ ನಿಂತು ಇಣುಕಿ ನೋಡುತ್ತಿದ್ದ. ಅವನ ಮುಖದಲ್ಲಿ ತಾಯಿಯ ಬಗೆಗಿನ ಭಯಕ್ಕಿಂತ ಆಟಕ್ಕೆ ಹೋಗಲು ತಾಯಿಯಿಂದ ತನ್ನ ಗೆಳೆಯ ಹೇಗೆ ಅನುಮತಿ ದಕ್ಕಿಸಿಕೊಳ್ಳುತ್ತಾನೋ ಎಂಬುದನ್ನು ತಿಳಿಯುವ ಕುತೂಹಲವೇ ಮಿಗಿಲಾಗಿತ್ತು. ಪ್ರತಿದಿನ ಸಂಜೆ ಆಟಕ್ಕೆ ಹೋಗುವ ಮೊದಲು ತಾಯಿಯ ಬೈಗುಳ ಕೇಳಿಕೊಳ್ಳಲೇ ಬೇಕು. ರಜೆಯಿದ್ದ ದಿನವಂತೂ ಬೆಳಗಿಂದಲೇ ಆಟ. ಇಲ್ಲವಾದರೆ. ರಜೆ ಕೊಡುವುದಾದರೂ ಏತಕ್ಕೆ? ಆದರೆ, ಇಷ್ಟೆಲ್ಲ ಬೈಯುವ ತಾಯಿ ತನ್ನನ್ನು ಅನಂತಕುಮಾರನೊಡನೆ ಆಟಕ್ಕೆ ಕಳುಹಿಸಲು ಒಪ್ಪುತ್ತಿದ್ದುದು ಹೇಗೆ, ಅದಕ್ಕೆ ಸಂಬಂಧಿಸಿದಂತೆ ಅನಂತನ ವಕಾಲತ್ತು ಹೇಗೆ ಪರಿಣಾಮಕಾರಿಯಾಗಿರುತ್ತಿತ್ತು ಎಂಬುದನ್ನು ತಿಳಿಯಲು ಮಕ್ಬೂಲ್ ಎಷ್ಟೇ ಗಮನವಿಟ್ಟು ನೋಡಿದರೂ ಆಲಿಸಿದರೂ ಗೊತ್ತಾಗುತ್ತಿರಲಿಲ್ಲ. ಗೆಳೆಯನ ತಾಯಿಯ ಟೀಕೆಗಳನ್ನೆಲ್ಲ ಅನಂತನ ಮುಗುಳುನಗೆಯೇ ಸೋಲಿಸುತ್ತಿತ್ತೋ, ಆಕೆಯ ಮಾತು ಮುಗಿಯುವವರೆಗೆ ಮೌನವಾಗಿ ನಿಂತೇ ಇರುವ ಅಚಲಯೋಗವು ಪರಿಣಾಮಕಾರಿಯಾಗುತ್ತಿತ್ತೋ, ಅಥವಾ.. ಅನಂತ ತನ್ನ ಮಾತಿನ ಕೌಶಲದಿಂದ... ಅಗೋ, ಅನುಮತಿ ಸಿಕ್ಕಿಯೇ ಬಿಟ್ಟಿತು !




ಸರಿ, ಇವತ್ತು ಒಂದು ದಿನ ಹೋಗಿ ಆಟ ಆಡ್ಕೊಳ್ಳಿ. ಬೇಗ ಮುಗಿಸಿ ಬರಬೇಕು.. ಆದ್ರ ಇವತ್ತು ಒಂದೇದಿನ ತಿಳೀತೇನು.. ನಾಳೆಯಿಂದ ಎಲ್ಲೂಹೋಗಾಂಗಿಲ್ಲ. ನೀ ಬಂದ ನಿಂತಿ ಅಂದ್ರನಾ ಏನ್ ಕಳಿಸಾಂಗಿಲ್ಲ.. ತಿಳೀತೇನು?


ಮಕ್ಬೂಲನ ತಾಯಿಯ ಮಾತು ಮುಗಿಯುವ ಮುನ್ನವೇ ಹುಡುಗರಿಬ್ಬರೂ ಯಾವುದೋ ಮರದ ಮೇಲೆ ಕುಳಿತಿರುತ್ತಿದ್ದರು. ಕೊನೆಯ ವಾಕ್ಯದಲ್ಲಿ ಆಕೆ ವಿಧಿಸಿದ ಷರತ್ತು ಅವರ ಕಿವಿಗೆ ಬೀಳುತ್ತಿರಲಿಲ್ಲ. ಆದ್ದರಿಂದಲೇ ಮರುದಿನ ಸಂಜೆಯೂ ಇದೇ ಕಥಾನಕದ ಪುನರಾವರ್ತನೆಯಾಗುತ್ತಿತ್ತು. ಮರುದಿನದಿಂದ ಮಕ್ಬೂಲನನ್ನು ಅನಂತನೊಡನೆ ಆಡಲು ಕಳುಹಿಸುವುದಿಲ್ಲವೆಂದು ದೃಢವಾಗಿ ತೀರ್ಮಾನಿಸಿಕೊಂಡಿದ್ದ ತಾನು ಅನಂತನ ತಂತ್ರಕ್ಕೆ ಸೋಲುತ್ತಿದ್ದ ಬಗೆ ಹೇಗೆಂಬುದು ಆ ತಾಯಿಗೂ ತಿಳಿಯುತ್ತಿರಲಿಲ್ಲವೇನೋ. ಹಾಗಾಗಿ ಆಕೆ ಮನೆಯವರೊಡನೆ ಆಗಾಗ ಹೀಗೆ ಹೇಳುವುದಿತ್ತು: ಕುಮಾರ ಭಾರೀ ತಂತ್ರಗಾರ ಇದಾನ. ನಾಳೆ ಅಂವಾ ದೊಡ್ಡ ರಾಜಕಾರಣಿ ಆಗ್ತಾನ, ಅಂವ ಮಂತ್ರಿ ಆಗೋದು ಖರೆ. *

# ಬಂಧನದ ಹೊತ್ತಿಗೆ ಭೋಜನದ ನೆನಪು



ಸದಾ ಹಸನ್ಮುಖಿಯಾಗಿದ್ದ ಅನಂತಕುಮಾರ್ ಉತ್ಸಾಹಶೀಲರಷ್ಟೇ ಅಲ್ಲ, ಪರಿಸ್ಥಿತಿ ಏನೇ ಇದ್ದರೂ ಹುರುಪಿನಿಂದಿರುವಂತೆ ಉಳಿದವರನ್ನೂ ಹುರಿದುಂಬಿಸುತ್ತಿದ್ದರು. ಒಮ್ಮೆ, ಆಗಿನ ವಿರೋಧ ಪಕ್ಷದ ನಾಯಕರಾದ ಸುಷ್ಮಾ ಸ್ವರಾಜ್‌ರವರೊಡನೆ ಅರುಣ್ ಜೇಟ್ಲಿಯವರು ಜಮ್ಮು - ಕಾಶ್ಮೀರಕ್ಕೆ ತೆರಳುವ ಕಾರ್ಯಕ್ರಮವಿತ್ತು. ಆದರೆ, ಆ ಪ್ರದೇಶವನ್ನುಪ್ರವೇಶಿಸಿದ ಕೂಡಲೇ ಅವರನ್ನು ರಾಜ್ಯಸರ್ಕಾರವು ದಸ್ತಗಿರಿ ಮಾಡುವ ತಂತ್ರ ಹೂಡಿತ್ತು. ಇದರ ಸುಳಿವನ್ನರಿತ ಅನಂತಕುಮಾರ್, ತಾವೂ ಜೇಟ್ಲಿಯವರೊಡನೆ ಹೊರಟರು. ನಿರೀಕ್ಷೆಯಂತೆ, ಮೂವರನ್ನೂ ವಿಮಾನ ನಿಲ್ದಾಣದಲ್ಲಿ ದಸ್ತಗಿರಿ ಮಾಡಲಾಯಿತು. ಮಧ್ಯರಾತ್ರಿಯ ಹೊತ್ತಿಗೆ ಅಪರಿಚಿತ ಸ್ಥಳವೊಂದಕ್ಕೆ ಅವರನ್ನು ತಲುಪಿಸಲಾಯಿತು. ಅಲ್ಲಿಯೇ ಪಕ್ಕದ ಪಂಜಾಬ್ ರಾಜ್ಯದ ಕೆಲವು ಕಾರ್ಯಕರ್ತರು ಅವರಿಗೆ ಊಟದ ವ್ಯವಸ್ಥೆ ಮಾಡಿದರು. ಮಾರನೆಯ ದಿನ ಅವರೆಲ್ಲ ಮತ್ತೆ ಜಮ್ಮು ಕಾಶ್ಮೀರ ರಾಜ್ಯಕ್ಕೆ ಮರಳಿದಾಗ, ಪುನಃ ಅವರನ್ನು ದಸ್ತಗಿರಿ ಮಾಡಲಾಯಿತು. ಜೈಲಿನಂತೆ ಮಾರ್ಪಾಡು ಗೊಳಿಸಲಾದ ಕಟ್ಟಡವೊಂದರಲ್ಲಿ ಅವರನ್ನು ಇರಿಸಲಾಗಿತ್ತು. ಹೀಗಾಗಿ, ಕಾರ್ಯಕರ್ತರಲ್ಲಿ ಅಪಾರವಾದ ಸಿಟ್ಟು ಮೇಳೈಸಿತ್ತು. ಮುಂದೇನು ಮಾಡುವುದೆಂದು ಎಲ್ಲರೂ ಗಂಭೀರವಾಗಿ ಚಿಂತಿಸುತ್ತಿರುವಾಗ, ಅನಂತಕುಮಾರ್ ಅರುಣ್ ಜೇಟ್ಲಿಯವರೆಡೆಗೆ ಬಂದರು... ಅವರು ಯಾವುದೋ ಗಹನವಾದ ವಿಚಾರವನ್ನು ಹೇಳಲು ತವಕಿಸುತ್ತಿರಬೇಕೆಂದು ಜೇಟ್ಲಿಯವರಿಗೆ ತೋರಿತು. ಅನಂತಕುಮಾರ್ ಗಂಭೀರ ಭಾವದಲ್ಲಿಯೇ ಇಲ್ಲಿನ ಕಾಶ್ಮೀರಿ ಭೋಜನಬಹಳ ಅಪರೂಪವಂತೆ. ಆದರೆ ಅದು ದೊರೆಯುವುದು ೭೦-೮೦ ಕಿ. ಮೀ.ದೂರದಲ್ಲಿ. ನೀವು ಈ ಪ್ರದೇಶಕ್ಕೆ ಪರಿಚಿತರು. ನಮ್ಮಿಬ್ಬರಿಗೂ ಇದರ ವ್ಯವಸ್ಥೆಮಾಡುತ್ತೀರಾ? ಎಂದು ಕೇಳುವುದೇ? ಸರಿ, ಗೆಳೆಯನ ಆಶಯವನ್ನು ಈಡೇರಿಸದಿರುವುದು ಹೇಗೆ? ಜೇಟ್ಲಿ ಯಾರಿಗೋಫೋನ್ ಮಾಡಿದರು. ೧೧ ಗಂಟೆಯವರೆಗೂ ಆ ಜನರು ಬರುವುದನ್ನೇ ಅನಂತ್ ಕಾಯುತ್ತಿದ್ದರು. ಇದು ಅನಂತಕುಮಾರ್ ಅವರ ಸರಳ ವ್ಯಕ್ತಿತ್ವಕ್ಕೆ ನಿದರ್ಶನದಂತಿದೆ. ದುಗುಡಪೂರಿತ ಸನ್ನಿವೇಶಗಳಲ್ಲಿ ಅವರು ಲವಲವಿಕೆಯಿಂದ ನಮ್ಮನ್ನು ಹುರಿದುಂಬಿಸುತ್ತ ಸದಾ ನಮ್ಮಲ್ಲಿ ಉತ್ಸಾಹವನ್ನು ತುಂಬುತ್ತಿದ್ದರು ಎಂದು ಅರುಣ್‌ಜೇಟ್ಲಿ ಸ್ಮರಿಸಿದ್ದಾರೆ. *

ನಾನು ಕಂಡಂತೆ



ಅನಂತಕುಮಾರ್

# ಅಪಾರ ಜನರ ಆಪ್ತಮಿತ್ರ ಅನಂತ

## ಶ್ರೀ ಅರುಣ್ ಜೇಟ್ಲಿ ಮಾಜಿ ಕೇಂದ್ರ ಸಚಿವರು

ಅನಂತಕುಮಾರ್ ವಿದ್ಯಾರ್ಥಿ ಪರಿಷತ್ತಿಗೆ ಹೊಸದಾಗಿ ಸೇರ್ಪಡೆಯಾದ ಕಾಲದಿಂದಲೂ ನನಗೆ ಅವರ ಪರಿಚಯವಿದೆ. ನಾನು ಅವರಿಗಿಂತಲೂ ವಯಸ್ಸಿನಲ್ಲಿ ಸ್ವಲ್ಪ ಹಿರಿಯ. ಎ.ಬಿ.ವಿ.ಪಿ.ಯೊಂದಿಗೆ ಅವರು ಸುದೀರ್ಘ ಕಾಲ ಒಡನಾಟವಿಟ್ಟುಕೊಂಡಿದ್ದರು. ೪೦ ವರ್ಷಗಳ ಅವರೊಂದಿಗಿನ ಸ್ನೇಹವು, ರಾಜಕೀಯ ಸಂಬಂಧವನ್ನೂ ಮೀರಿದ ಆತ್ಮೀಯ ಸಂಬಂಧವಾಗಿ ಮಾರ್ಪಟ್ಟಿತು. ನಾನು ದೆಹಲಿಯಲ್ಲಿದ್ದೆ. ಅವರು ಬೆಂಗಳೂರಿನಲ್ಲಿದ್ದರು. ಆದರೂ ಅವರೊಂದಿಗೆ ಒಡನಾಡುವ ಹೆಚ್ಚಿನ ಸದವಕಾಶಗಳು ನನಗೆ ದೊರೆತ ಕಾರಣ, ಅವರ ವ್ಯಕ್ತಿತ್ವವನ್ನು ಇತರರಿಗಿಂತಲೂ ಹೆಚ್ಚು ಆಳವಾಗಿ ಅರಿತುಕೊಳ್ಳಲು ನನಗೆ ಸಾಧ್ಯವಾಯಿತು. ಅವರು ಬಿ.ಜೆ.ಪಿ.ಗೆ ಬಂದಾಗ, ರಾಷ್ಟ್ರೀಯ ಕಾರ್ಯಕಾರಿ ಸಭೆಗಳಲ್ಲಿ ನಾವಿಬ್ಬರೂ ಭೇಟಿಯಾಗುತ್ತಿದ್ದೆವು.

ನಾನು ವಕೀಲಿ ವೃತ್ತಿಯ ಸಂಬಂಧವಾಗಿ ಕರ್ನಾಟಕದ ಹೈಕೋರ್ಟ್‌ಗೆ ಬರುವ ಸಂದರ್ಭಗಳಲ್ಲಿ, ಎರಡು ಮೂರು ದಿನ ಮೊದಲೇ ಅವರಿಗೆ ದೂರವಾಣಿ ಮೂಲಕ ಮಾಹಿತಿ ನೀಡುತ್ತಿದ್ದೆ. ದೆಹಲಿಯಿಂದ ವಿಮಾನದಲ್ಲಿ ಹೊರಟು ಬೆಂಗಳೂರಿಗೆ ಬಂದಾಗಲೆಲ್ಲ ಅವರು ಹೋಟೆಲಿನಲ್ಲಿ ರಾತ್ರಿಯ ಹೊತ್ತು ನನಗಾಗಿ ಕಾಯುತ್ತಿದ್ದರು. ಇಬ್ಬರೂ ಜೊತೆಗೂಡಿ ಊಟ ಮಾಡುತ್ತಿದ್ದೆವು. ತಡರಾತ್ರಿ, ಸುಮಾರು ೨ ಗಂಟೆಯವರೆಗೂ ಪಕ್ಷದ ಆಗುಹೋಗುಗಳು, ಸಂಘಟನೆ, ಸ್ನೇಹಿತರು ಹಾಗೂ ಪ್ರಚಲಿತ ವಿದ್ಯಮಾನಗಳ ಬಗ್ಗೆ ಚರ್ಚಿಸುತ್ತಿದ್ದೆವು.

ಪಕ್ಷದಲ್ಲಿ ತಮ್ಮನ್ನು ನಿಷ್ಠೆಯಿಂದ ತೊಡಗಿಸಿಕೊಂಡು, ಸಾಕಷ್ಟು ಶ್ರಮವಹಿಸಿ ದುಡಿದ ಅವರು, ರಾಷ್ಟ್ರೀಯ ಪಕ್ಷದ ಅವಿಚ್ಛಿನ್ನ ಭಾಗವಾದರು. ಪಕ್ಷದಲ್ಲಿ ಉನ್ನತ ಹುದ್ದೆಗೇರತೊಡಗಿದ ಅನಂತಕುಮಾರ್, ಪಾರ್ಲಿಮೆಂಟ್ ಸದಸ್ಯರಾಗಿ ದೆಹಲಿಗೆ ಆಗಮಿಸಿದರು. ಶೀಘ್ರದಲ್ಲೇ ಸಚಿವರಾಗಿಯೂ ನಿಯುಕ್ತಿಗೊಂಡರು. ಅವರು ನನ್ನನ್ನು ಹೆಸರಿನಿಂದ ಸಂಬೋಧಿಸುತ್ತಿರಲಿಲ್ಲ. ಬದಲಾಗಿ, ವಕೀಲ್ ಸಾಹಬ್ ಎನ್ನುತ್ತಿದ್ದರು. ನಮ್ಮಿಬ್ಬರದೂ ಅನೌಪಚಾರಿಕ ಸ್ನೇಹವಾಗಿತ್ತು. ರಾಷ್ಟ್ರೀಯ ಕಾರ್ಯಕಾರಿ ಸಭೆಗಳ ಸಂದರ್ಭದಲ್ಲಿ, ನಮ್ಮನ್ನಿಂದು ಊಟಕ್ಕೆ ಎಲ್ಲಿಗೆ ಕರೆದೊಯ್ಯುತ್ತೀರಿ? ಎನ್ನುತ್ತಿದ್ದರು. ನಮ್ಮ ಈ ಅನೌಪಚಾರಿಕ ಸಂಬಂಧ ಹಾಗೂ ಸ್ನೇಹದ ಹಿನ್ನೆಲೆಯಲ್ಲಿ, ರಾಜಕೀಯ, ಪಕ್ಷ ಹಾಗೂ ರಾಷ್ಟ್ರಕ್ಕೆ ಸಂಬಂಧಿಸಿದ ಅನೇಕ ವಿಶಯಗಳ ಬಗ್ಗೆ ನಮ್ಮ ಚರ್ಚೆ ಮುಂದುವರಿಯುತ್ತಿತ್ತು.



### ಪಕ್ಷಸಂಘಟನೆಯ ನಿರ್ವಹಣೆ

ತಮ್ಮ ವೃತ್ತಿ ಜೀವನವನ್ನು ತ್ಯಾಗಮಾಡಿದ ಅನಂತಕುಮಾರ್; ತಮ್ಮ ಕೊನೆಯ ದಿನಗಳಲ್ಲಿ ವೈಯಕ್ತಿಕ ಹಾಗೂ ಕೌಟುಂಬಿಕ ಜೀವನಕ್ಕೂ ಹೆಚ್ಚು ಪ್ರಾಮುಖ್ಯತೆ ನೀಡಲಿಲ್ಲ. ಎ.ಬಿ.ವಿ.ಪಿ.ಯ ಒಬ್ಬ ಸಾಮಾನ್ಯ ಕಾರ್ಯಕರ್ತನ ಸ್ಥಾನದಿಂದ ಪದಾಧಿಕಾರಿಯಾಗಿ ನಂತರ ಬಿ.ಜೆ.ಪಿ.ಯ ಪ್ರಧಾನ ಕಾರ್ಯದಶಿಗಳಾದರು. ಇದರ ತರುವಾಯ ಪಕ್ಷದ ರಾಜ್ಯಾಧ್ಯಕ್ಷರಾದರು. ರಾಷ್ಟ್ರಮಟ್ಟದಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿಯ ಹುದ್ದೆಯನ್ನೂ ಅಲಂಕರಿಸಿದ ಅವರು, ಅತ್ಯಂತ ಉನ್ನತ ಹುದ್ದೆಯಾದ, ಪಕ್ಷದ ಪಾರ್ಲಿಮೆಂಟರಿ ಬೋರ್ಡ್‌ನ ಕಾರ್ಯದರ್ಶಿಯ ಸ್ಥಾನವನ್ನೂ ನಿಭಾಯಿಸಿದರು. ಎರಡು ಸರ್ಕಾರಗಳಲ್ಲೂ ಸಚಿವರಾಗಿದ್ದ ಇವರು, ೬ ಬಾರಿ ಪಾರ್ಲಿಮೆಂಟ್ ಸದಸ್ಯರಾಗಿದ್ದರು. ಬಿಹಾರ್, ಮಧ್ಯಪ್ರದೇಶದಂತಹ ಜಟಿಲ ರಾಜ್ಯಗಳನ್ನೂ ಒಳಗೊಂಡಂತೆ ಹಲವು ರಾಜ್ಯಗಳ ಪ್ರಭಾರಿಗಳಾಗಿಯೂ ಇವರು ಕಾರ್ಯನಿರ್ವಹಿಸಿದ್ದಾರೆ.ಅವರ ಜೀವನವನ್ನು ನಾನು ಅವಲೋಕಿಸಿದಾಗ; ಸಚಿವ ಸ್ಥಾನದ ತಮ್ಮ ಪಾತ್ರ ನಿರ್ವಹಣೆಗಿಂತಲೂ ಮೀರಿದ ಅವರ ಪಕ್ಷದ ಸಂಘಟನೆಯು ಬಹಳ ಮಹತ್ವಪೂರ್ಣವಾದುದೆಂದು ತಿಳಿದುಬರುತ್ತದೆ. ಪಕ್ಷದ ಪ್ರಮುಖ ಅಂಗವಾಗಿದ್ದ ಇವರು, ನಿರ್ಧಾರಗಳನ್ನು ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾ, ನಮ್ಮ ರಾಜಕೀಯ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿದ್ದರು.

ಅನಂತಕುಮಾರ್ ಅವರನ್ನು ನೆನಪಿಸಿಕೊಳ್ಳಬಹುದಾದ ಅವರ ಅತ್ಯಂತ ಮಹತ್ವದ ಹಾಗೂ ಗಮನಾರ್ಹ ಕೊಡುಗೆಯೆಂದರೆ; ಪಕ್ಷದ ಹಿರಿಯ ನಾಯಕರುಗಳಾದ



ಯಡಿಯೂರಪ್ಪ, ಈಶ್ವರಪ್ಪ, ಸದಾನಂದ ಗೌಡ, ಜಗದೀಶ್ ಶೆಟ್ಟರ್ ಮುಂತಾದವರನ್ನೊಳಗೊಂಡಂತೆ ಪಕ್ಷದ ಸಂಘಟನೆಗೆ ಅವರು ನೀಡಿದ ಪ್ರಾಮುಖ್ಯತೆ. ಬಿ.ಜೆ.ಪಿ ಪಕ್ಷವು ಕೇವಲ ಉತ್ತರ ಭಾರತಕ್ಕೆ ಮೀಸಲಾದ ಪಕ್ಷವೆಂಬ ಭಾವನೆಯಿದ್ದ ದಿನಗಳಲ್ಲಿ, ಅನಂತಕುಮಾರ್ ಅವರ ಶ್ರಮದಿಂದಾಗಿ, ಸಾವಿರಾರು ಜನರು ಕರ್ನಾಟಕದ ಬಿ.ಜೆ.ಪಿ ಪಕ್ಷಕ್ಕಾಗಿ ದುಡಿಯತೊಡಗಿದರು. ರಾಜ್ಯದಲ್ಲಿನ ನಮ್ಮ ಪ್ರಾತಿನಿಧ್ಯವು ನಾಮಮಾತ್ರದ್ದಾಗಿತ್ತು. ೧೯೯೦ರ ಉತ್ತರಾರ್ಧದಲ್ಲಿ, ಪಕ್ಷವು ಸಂಪೂರ್ಣ ಚಟುವಟಿಕೆಯಿಂದ ಕೂಡಿದ್ದು, ೪೦ ರಿಂದ ೪೫ ಅಸೆಂಬ್ಲಿ ಸ್ಥಾನಗಳನ್ನಷ್ಟೇ ಅಲ್ಲದೆ ೪ ಎಂ.ಪಿ. ಸ್ಥಾನವನ್ನು ನಾವು ನಿರೀಕ್ಷಿಸಿದ್ದೆವು. ನನಗೆ ನೆನಪಿದ್ದಂತೆ ೨೦೦೪ರಲ್ಲಿ ನಾನು ಕರ್ನಾಟಕದ ಪ್ರಭಾರಿಯಾಗಿದ್ದೆ. ಇದರೊಂದಿಗೆ ಮತ್ತೆರಡು ಮೂರು ಸದವಕಾಶಗಳೂ ನನಗೆ ದೊರೆತವು. ಅನಂತಕುಮಾರ್ ಆಗ ಪಕ್ಷದ ರಾಜ್ಯಾಧ್ಯಕ್ಷರಾಗಿದ್ದರು. ರಾಜ್ಯದಲ್ಲಿ ಮುಂದುವರೆಯುವ ಈ ಸದವಕಾಶವನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಯಡಿಯೂರಪ್ಪ ಮುಂತಾದವರನ್ನು ಒಳಗೊಂಡಂತೆ ನಾವೆಲ್ಲರೂ ಒಟ್ಟಾಗಿ ಸೇರಿ ಅತ್ಯಂತ ಎಚ್ಚರಿಕೆಯಿಂದ ಕಾರ್ಯಯೋಜನೆಗಳನ್ನು ರೂಪಿಸುತ್ತಿದ್ದೆವು. ಅದುವರೆಗೂ ಕೇವಲ ಅಂಚಿನಲ್ಲಿ ನಿಲ್ಲುತ್ತಿದ್ದ ನಮ್ಮ ಪಕ್ಷವು ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ನಮ್ಮ ಕೆಲವು ನಾಯಕರು, ಯಡಿಯೂರಪ್ಪನವರು ಹಾಗೂ ಅನಂತಕುಮಾರ್ ನಡುವಿನ ಭಿನ್ನಾಭಿಪ್ರಾಯಗಳ ಬಗ್ಗೆ ವಾರ್ತಾ ಪತ್ರಿಕೆಗಳಲ್ಲಿ ಸಾಕಷ್ಟು ವರದಿಗಳು ಬಂದವು. ಆದರೆ ಅವರಿಬ್ಬರೂ ಸದಾ ಪರಸ್ಪರ ಚರ್ಚಿಸಿ, ಒಮ್ಮತದ ಪರಿಹಾರ ಮಾರ್ಗದೊಂದಿಗೆ ನನ್ನ ಬಳಿ ಬರುತ್ತಿದ್ದರು. ಇವರಿಬ್ಬರಲ್ಲಿ ಯಾರಾದರೊಬ್ಬರು ನನ್ನನ್ನು ಭೇಟಿಮಾಡಿದಾಗಲೆಲ್ಲ, ಮತ್ತೊಬ್ಬರ ಹೆಸರನ್ನು ಹೇಳದೆ, ನನ್ನ ಆತ್ಮೀಯ ಸ್ನೇಹಿತ ಎಂದೇ ಮಾತಿಗೆ ತೊಡಗುತ್ತಿದ್ದರು. ಯಡಿಯೂರಪ್ಪನವರು, ನನ್ನ ಆತ್ಮೀಯ ಸ್ನೇಹಿತ... ಎಂದು ಮಾತಿಗೆ ತೊಡಗಿದಾಗೆಲ್ಲ, ಅದು ಅನಂತಕುಮಾರ್ ಅವರನ್ನು ಕುರಿತೇ ಆಗಿರುತ್ತಿತ್ತು. ಅಂತೆಯೇ, ಅನಂತಕುಮಾರ್, ನನ್ನ ಆತ್ಮೀಯ ಸ್ನೇಹಿತ... ಎಂದು ಮಾತಿಗೆ ತೊಡಗಿದಾಗ, ಅದು ಯಡಿಯೂರಪ್ಪನವರನ್ನು ಕುರಿತೇ ಆಗಿರುತ್ತಿತ್ತು.

### ಮುತ್ಸದ್ಧಿಯ ಮಂತ್ರದಂಡ

೨೦೦೮ರಲ್ಲಿ ನಮಗೆ ಬಹುಮತ ದೊರೆಯಿತು. ಅಂದಿನಿಂದಲೂ ನಮ್ಮದು ಅತಿ ದೊಡ್ಡ ಪಕ್ಷವಾಗಿದೆ. ಪಾರ್ಲಿಮೆಂಟಿಗೂ ಸಹ ಅತಿ ದೊಡ್ಡ ತಂಡವನ್ನೇ ನಾವು ಕಳುಹಿಸಿದೆವು. ಇದರಿಂದಾಗಿ, ದಕ್ಷಿಣ ಭಾರತದಲ್ಲಿನ ನಮ್ಮ ಪ್ರವೇಶಕ್ಕೆ ಅತಿ ದೊಡ್ಡ ಅವಕಾಶವು ದೊರೆತಂತಾಯಿತು. ಚುನಾವಣೆಯಲ್ಲಿ ಗೆಲ್ಲುವುದು, ಸ್ಥಾನಗಳನ್ನು ಗಿಟ್ಟಿಸುವುದು, ಮಾನ್ಯತೆ ಪಡೆಯುವುದು ಮುಂತಾದ ವ್ಯಕ್ತಿಗತ ಯಶಸ್ಸಿಗಿಂತಲೂ ಹೆಚ್ಚಾಗಿ ಅಪರಿಚಿತ ಪ್ರದೇಶಗಳಲ್ಲಿ ಸಂಘಟನೆಯನ್ನು ಮುಂಚೂಣಿಗೆ ತರುವುದು ಸವಾಲಿನ ಕೆಲಸವೇ ಹೌದು. ಈ ನಿಟ್ಟಿನಲ್ಲಿ ಅನಂತಕುಮಾರ್ ಹಾಗೂ ಅವರ ತಂಡದ ಕೊಡುಗೆಯನ್ನು ಸದಾ ನೆನಪಿಸಿಕೊಳ್ಳಲಾಗುತ್ತದೆ.

ವಾಜಪೇಯಿ ಹಾಗೂ ಮೋದಿಯವರ ಸರ್ಕಾರದಲ್ಲಿ ಸಚಿವರಾಗಿದ್ದ ಅನಂತಕುಮಾರ್, ಅನೇಕ ಇಲಾಖೆಗಳನ್ನು ನಿಭಾಯಿಸಿದ್ದಾರೆ. ಸಂಸದೀಯ ವ್ಯವಹಾರಗಳ ಸಚಿವರಾಗಿ, ಜನರನ್ನು ಸಂಪರ್ಕಿಸುವಲ್ಲಿನ ಮುತ್ಸದ್ದಿತನವು ಅವರ ವ್ಯಕ್ತಿತ್ವದ ಪ್ರಮುಖ ಅಂಶವೆಂದು ಹೇಳಬಹುದು. ಇದು ಅವರ ಮಂತ್ರದಂಡವಷ್ಟೇ ಅಲ್ಲ, ಅವರ ಉಚ್ಛ್ರಾಯದ ಕಾಲವೂ ಹೌದು. ತಮ್ಮ ಹಸನ್ಮುಖದಿಂದ ಅವರು ಸದಾ ವಿರೋಧ ಪಕ್ಷದವರೊಂದಿಗೆ ಸೌಹಾರ್ದಯುತ ಸಂಬಂಧವನ್ನು ಬೆಳೆಸುವಲ್ಲಿ ಯಶಸ್ವಿಯಾಗುತ್ತಿದ್ದರು.

ಕಳೆದ ೧೦-೧೫ ವರ್ಷಗಳ ಹಲವಾರು ಪಾರ್ಲಿಮೆಂಟ್ ಅಧಿವೇಶನಗಳನ್ನು ಗಮನಿಸಿದಾಗ, ಇವರ ಅಧಿಕಾರಾವಧಿಯಲ್ಲಿ ಸರ್ಕಾರದ ಅತಿ ಹೆಚ್ಚಿನ ಶಾಸಕಾಂಗ ವ್ಯವಹಾರಗಳು ನಡೆದಿರುವುದನ್ನು ಕಾಣಬಹುದು. ಅವರ ಸೌಮ್ಯ ಸ್ವಭಾವ,



ಹಸನ್ಮುಖ, ಇತರರೊಂದಿಗೆ ಎಂದೂ ಗಟ್ಟಿಯಾಗಿ ಮಾತನಾಡದ ವ್ಯಕ್ತಿತ್ವ ಜನರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದವು.

ಅವರ ಅನಾರೋಗ್ಯದ ವಿಷಯವು ತಿಳಿದಾಗ, ನಾನೂ ಸಹ ಅನಾರೋಗ್ಯದ ನಿಮಿತ್ತ ಶಸ್ತ್ರಚಿಕಿತ್ಸೆಗೊಳಗಾಗಿದ್ದೆ. ಲಭ್ಯವಿರುವ ಅತ್ಯುತ್ತಮ ಚಿಕಿತ್ಸೆಯನ್ನು ಅವರಿಗೆ ದೊರಕಿಸಲಾಯಿತಾದರು, ನಾವೆಲ್ಲರೂ ಅವರ ಬಗ್ಗೆ ಚಿಂತಾಕ್ರಾಂತರಾಗಿದ್ದೆವು. ಕೊನೆಗೂ ವಿಧಿಯು ನಮ್ಮಿಂದ ಅವರನ್ನು ದೂರಕ್ಕೆ ಸೆಳೆದೊಯ್ಯಿತು.

**ಜನಸ್ತೋಮದ ಆಪ್ತಮಿತ್ರ**

ನಮಗೆ ಪ್ರೀತಿಪಾತ್ರರಾದವರ ಸಂತಾಪಸೂಚಕ ಸಭೆಯಲ್ಲಿ ಭಾಗವಹಿಸುವುದು ಬಹಳ ದುಃಖಪೂರಿತ ವಿಶಯವೇ ಹೌದು. ಅನಂತಕುಮಾರ್ ಅವರ ಈ ನಗುಮುಖವು, ಅವರ ಶಾಶ್ವತ ನೆನಪನ್ನು ಪ್ರಭಾವಿತಗೊಳಿಸಿದಂತೆಯೇ, ಅವರ ಅಗಲಿಕೆಯ ದೆಸೆಯಿಂದ ನಮ್ಮನ್ನು ವರ್ಣನಾತೀತ ವ್ಯಾಕುಲಕ್ಕೂ ಈಡುಮಾಡಿದೆ.

ಅವರಿಗೆ ಅತನೂ ವಯಸ್ಸಾಗಿರಲಿಲ್ಲ. ತಮ್ಮ ಕುಟುಂಬದೆಡೆಗಿನ ಅವರ ಕೆಲವು ಕರ್ತವ್ಯಗಳಿನ್ನೂ ಬಾಕಿಯಿದ್ದವು. ಚಿಕ್ಕ ವಯಸ್ಸಿನಿಂದಲೇ ಅವರು ಸಾರ್ವಜನಿಕರೊಂದಿಗೆ ಒಡನಾಟವನ್ನು ಪ್ರಾರಂಭಿಸಿ, ರಾಜಕೀಯ ಜೀವನಕ್ಕೆ ಅಡಿಯಿಟ್ಟರು. ಸಾರ್ವಜನಿಕ ಕ್ಷೇತ್ರದ ಇನ್ನೂ ಅನೇಕ ವರ್ಷಗಳು ಅವರ ಮುಂದಿದ್ದವು. ಆದರೆ ವಿಧಿ ಬೇರೊಂದನ್ನು ಬಗೆಯಿತು. ರಾಷ್ಟ್ರದ ಮುಂಚೂಣಿ ನಾಯಕರಲ್ಲೊಬ್ಬರಾದ ಇವರ ಅಕಾಲಿಕ ಮರಣದಿಂದಾಗಿ ನಾವು ಕೇವಲ ಒಬ್ಬ ಸಚಿವನನ್ನು ಹಾಗೂ ಸಂಸತ್ ಸದಸ್ಯನನ್ನು ಮಾತ್ರವೇ ಕಳೆದುಕೊಂಡಿಲ್ಲ; ಅಪಾರ ಜನಸ್ತೋಮದ ಆಪ್ತ ಮಿತ್ರನೊಬ್ಬನನ್ನು ಕಳೆದುಕೊಂಡಿದ್ದೇವೆ. ಅನಂತಕುಮಾರ್ ಅವರೊಂದಿಗೆ ವ್ಯವಹರಿಸಿದ ಎಲ್ಲರೂ ಅವರನ್ನು ತಮ್ಮ ಆಪ್ತ ಸ್ನೇಹಿತನೆಂದೇ ಭಾವಿಸಿದ್ದರು.

ತೇಜಸ್ವಿನಿಯವರೇ, ನಿಮ್ಮ ವ್ಯಥೆ ಹಾಗೂ ದುಃಖವನ್ನು ನಾವೆಲ್ಲರೂ ಹಂಚಿಕೊಳ್ಳುತ್ತೇವೆ. ಮಿಲಿಯಾಂತರ ಜನರು, ಪಕ್ಷದ ಕಾರ್ಯಕರ್ತರು ಹಾಗೂ ಸಹಾನುಭೂತಿಯುಳ್ಳ ಎಲ್ಲರೂ ನಿಮ್ಮೊಂದಿಗಿದ್ದಾರೆ. ನಾವೆಲ್ಲರೂ ಅವರ ಈ ಹಸನ್ಮುಖ ಹಾಗೂ ಮರೆಯಲಾರದ ಅವರ ನೆನಪಿನೊಂದಿಗೆ ಸದಾ ಜೀವಿಸುತ್ತೇವೆ. ಧನ್ಯವಾದಗಳು. *

ಅನಂತಕುಮಾರ್ ಅವರ ನಿಧನಕ್ಕೆ ಮೂರು ತಿಂಗಳ ಮುಂಚೆಯಷ್ಟೇ ಅತ್ಯಂತ ಮೇರು ನಿಲುವಿನ ನಾಯಕರಾದ ವಾಜಪೇಯಿಯವರನ್ನು ನಾವು ಕಳೆದುಕೊಂಡಿದ್ದೇವೆ. ವಾಜಪೇಯಿಯವರು ಬರೆದ ಒಂದು ಅತ್ಯುತ್ತಮ ಕವಿತೆ ನನಗೆ ಇಲ್ಲಿ ನೆನಪಾಗುತ್ತದೆ. ೧೯೬೪ರಲ್ಲಿ ರಾಷ್ಟ್ರ ನಾಯಕರೊಬ್ಬರ ಮರಣದ ಸಂದರ್ಭದಲ್ಲಿ ಅವರನ್ನು ಶ್ಲಾಘಿಸಿ ಬರೆದ ಈ ಕವಿತೆಯು ಅವರ ಅತ್ಯುತ್ತಮ ರಚನೆಗಳಲ್ಲೊಂದಾಗಿದೆ. ದೇಶದ ಅತ್ಯುನ್ನತ ನಾಯಕನ ಅಗಲಿಕೆಯ ಸಂದರ್ಭದಲ್ಲಿನ ಇವರ ಈ ರಚನೆಯು ಮಿಕ್ಕೆಲ್ಲ ಭಾಷಣಗಳಿಗಿಂತಲೂ ಹೆಚ್ಚು ಗಮನಸೆಳೆಯುವಂತಹದ್ದು. ಇಂದಿನ ಈ ಸಂದರ್ಭದಲ್ಲಿ ನಾನು ಅದನ್ನು ನಿಮ್ಮ ಮುಂದೆ ಪ್ರಚುರಪಡಿಸುತ್ತೇನೆ. ಅವರು ಈ ಪದ್ಯವನ್ನು ಬರೆದು ಈಗಾಗಲೇ ೫೦ - ೬೦ ವರ್ಷಗಳು ಸಂದಿದ್ದರೂ ಈಗ ಓದುವಾಗ ಇದು ನಮ್ಮ ಸ್ನೇಹಿತ ಅನಂತಕುಮಾರ್ ಅವರನ್ನೇ ಕುರಿತು ಬರೆದಂತಿದೆ. ಅದರ ಒಂದು ತುಣುಕನ್ನು ನಾನೀಗ ಓದುತ್ತೇನೆ.





एक सपना था जो अधूरा रह गया, एक गीत था जो गूँगा हो गया, एक लौ थी जो अनन्त में विलीन हो गई। सपना था एक ऐसे संसार का जो भय और भूख से रहित होगा, गीत था एक ऐसे महाकाव्य का जिसमें गीता की गूँज और गुलाब की गंध थी। लौ थी एक ऐसे दीपक की जो रात भर जलता रहा, हर अँधेरे से लड़ता रहा और हमें रास्ता दिखाकर, एक प्रभात में निर्वाण को प्राप्त हो गया।

मृत्यु ध्रुव है, शरीर नश्वर है। कल कंचन की जिस काया को हम चंदन की चिता पर चढ़ा कर आए, उसका नाश निश्चित था। लेकिन क्या यह ज़रूरी था कि मौत इतनी चोरी छिपे आती? जब संगी-साथी सोए पड़े थे, जब पहरेदार बेखबर थे, हमारे जीवन की एक अमूल्य निधि लुट गई। भारत माता आज शोकमग्ना है – उसका सबसे लाड़ला राजकुमार खो गया। मानवता आज खिन्नमना है – उसका पुजारी सो गया। शांति आज अशांत है – उसका रक्षक चला गया। दलितों का सहारा छूट गया। जन जन की आँख का तारा टूट गया। यवनिका पात हो गया। विश्व के रंगमंच का प्रमुख अभिनेता अपना अंतिम अभिनय दिखाकर अन्तर्ध्यान हो गया।

ನಾವಾರೂ ವಾಜಪೇಯಿಯವರ ಈ ಭಾಷೆಯನ್ನು ಸರಿಗಟ್ಟಲಾರೆವು. ಇಂದು ನಾನಿದನ್ನು ಪುನರಾವರ್ತಿಸುವಾಗ, ಇಲ್ಲಿನ ಪದಗಳು ನಮ್ಮೆಲ್ಲರ ಹೃದಯದ ಭಾವಗಳನ್ನೇ ಬಿಂಬಿಸುತ್ತಿರುವಂತೆ ಭಾಸವಾಗುತ್ತಿದೆ. *

**-ಅರುಣ್ ಜೇಟ್ಲಿ**

# ರಾಮ ಮಂದಿರ ಹೋರಾಟದ ಕಾಲದ ಮಸುಕು ನೆನಪುಗಳು

ಅದು 1984 ಇಂದಿರಾ ಗಾಂಧಿ ಹತ್ಯೆ ಆದಾಗ ಮೊದಲ ಬಾರಿ ಹುಬ್ಬಳ್ಳಿಯ ಅಕ್ಕ ಪಕ್ಕದ ಮನೆಗಳಲ್ಲಿ ಟಿ ವಿ ಸೆಟ್ಸ್ ಗಳನ್ನು ನೋಡಿದ್ದು. ಆಗ ನನಗಿನ್ನೂ 6 ವರ್ಷ ವಯಸ್ಸು. ರಾತ್ರೋ ರಾತ್ರಿ ನಮ್ಮ ಮನೆ ಪಕ್ಕದಲ್ಲಿ ಸಿಖ್ಖರು ವಾಸಿಸುವ 3 ಅಂತಸ್ತಿನ ಬಿಲ್ಡಿಂಗ್ ಗೆ ಪೊಲೀಸ್ ಬಂದೋಬಸ್ತ್. ಆಗ ಯಾಕೆ ಏನು ಎಂಬುದು ಗೊತ್ತಿರಲಿಲ್ಲ.ಆದರೆ ಅದೇ ಸಬ್ ಲೋಕ್ ಎನ್ನುವ ಸಿಖ್ ಪರಿವಾರದವರ ಮನೆಯಲ್ಲಿ ಪೋರ್ಟಬಲ್ ಕಪ್ಪು ಬಿಳುಪು ಟಿ ವಿ ಯಲ್ಲಿ ಇಂದಿರಾ ಚಿತೆಗೆ ರಾಜೀವ್ ಅಗ್ನಿ ಇಟ್ಟುದನ್ನು ನೋಡಿದ ನೆನಪು. ಆದರೆ ಮುಂದೆ ನಡೆದ ಚುನಾವಣೆ ಬಗ್ಗೆ ಏನೂ ನೆನಪಿಲ್ಲ.ಆದರೆ ಅತ್ಯಂತ ಸುಂದರ ಸ್ಪುರದ್ರೂಪಿ ಯುವಕ ರಾಜೀವ ಗಾಂಧಿ ಪ್ರಧಾನಿ ಆಗಿದ್ದರು ಎಂದು ಸಂಯುಕ್ತ ಕರ್ನಾಟಕದಲ್ಲಿ ಓದಿದ ನೆನಪಿದೆ. ಆಗೆಲ್ಲ ಸಂಘದ ಪ್ರಚಾರಕರಾದ ಮಂಗೇಶ ಬೆಂಡೆ, ಮಿಸ್ಕಿನ ಕಾಕಾ, ಹರಿ ಭಾವು ವಝೆ ಇವರೆ ಲ್ಲ ವಾರಕ್ಕೊಮ್ಮೆ ಮನೆಗೆ ಊಟಕ್ಕೆ ಬರುತ್ತಿದ್ದರು. ಹೀಗಾಗಿ ವಾರಕ್ಕೊಮ್ಮೆ ಮನೆಯಲ್ಲಿ ಸಂಘದ ಕಾರ್ಯಕರ್ತರು ಬಂದಾಗ ತಂದೆ ಜೊತೆ ಮಾತನಾಡುತ್ತಿದ್ದ ಸಂದರ್ಭದಲ್ಲಿ ರಾಜೀವ್ ಗಾಂಧಿ, ಶಾ ಬಾನೋ ,ರಾಮ ಮಂದಿರ ಇವೆಲ್ಲ ಚರ್ಚೆಯಾಗುತ್ತಿದ್ದ ನೆನಪು.



(ಕಾಲ್ಪನಿಕ ಚಿತ್ರ: ಅಂತರ್ಜಾಲದಿಂದ)

ಆದರೆ ಆಗ ನನಗೆ ಇದೆಲ್ಲ ಅರ್ಥ ವಾಗುತ್ತಿರಲಿಲ್ಲ. ಆದರೆ ನಮ್ಮ ತಂದೆ ನಾವು ಶಾಲೆಗೆ ಹೋಗುತ್ತಿದ್ದಾಗ ಮಂದಿರವಲ್ಲೇ ಕಟ್ಟುವೆವು ಎಂಬ ಸ್ಟಿಕರ್ ಅನ್ನು ಬಾಗಿಲಿಗೆ ಅಂಟಿಸಿದ ನೆನಪು ಇನ್ನೂ ಇದೆ.ಹುಬ್ಬಳ್ಳಿ ಮೊದಲಿನಿಂದಲೂ ಸ್ವಲ್ಪ ಹಿಂದೂ ಮುಸ್ಲಿಮರ ದೃಷ್ಟಿಯಿಂದ ಸೂಕ್ಷ್ಮ ಶಹರ. ಹೀಗಾಗಿ ರಾಮ ಮಂದಿರ ಹೋರಾಟ ತಾರಕಕ್ಕೆ ಏರಿದಾಗ ನಾವು ವಾಸಿಸುವ ಚನ್ನಪೇಟೆ ಯಲ್ಲಿ ತಿಕ್ಕಾಟ, ಚಾಕು ಹಾಕುವುದು, ಕರ್ಫ್ಯೂ ಇವೆಲ್ಲ ಸಾಮಾನ್ಯ ಸಂಗತಿ ಆಗಿತ್ತು.

ನಮ್ಮ ಮನೆ ಪಕ್ಕದಲ್ಲೆ ಎಂ ಟಿ ಎಸ್ ಕಾಲೋನಿ. ಅಲ್ಲಿ ಅನಂತ ಕುಮಾರ, ಪ್ರಹ್ಲಾದ ಜೋಶಿ ಅವರ ಮನೆಗಳಿದ್ದುವು. ಹೀಗಾಗಿ ವಿಶ್ವ ಹಿಂದೂ ಪರಿಷತ್ ನಂತರ ಬಿಜೆಪಿ ಮಂದಿರ ಹೋರಾಟವನ್ನು ಕೈಗೆತ್ತಿ ಕೊಂಡಾಗ ಸಹಜವಾಗಿ ನಮ್ಮ ಅರವಿಂದ ನಗರದಲ್ಲಿ ಚಟುವಟಿಕೆ ನಡೆಯುತ್ತಿದ್ದವು. ನಮ್ಮ ಮನೆ ಎದುರಿನಿಂದ ರಾಮ ಮಂದಿರಕ್ಕೆ ಶಿಲೆ ಕಳಿಸುವ ಮೆರವಣಿಗೆ ಇನ್ನು ನೆನಪಿದೆ. ಆಗ ನಾನು 7 ನೇ ಇಯತ್ತೆ ಇರಬಹುದೇನೋ. ಈಗ ಬಿಜೆಪಿಯಲ್ಲಿರುವ ರವಿಕುಮಾರ, ಸುಭಾಷ ಸಿಂಗ್ ಜಮಾದಾರ ಇವರೆಲ್ಲ ಸೇರಿ ರಾಮ ಭಜನೆ ಮಾಡಿಸುತ್ತಾ ಇಟ್ಟಿಗೆ ಒಂದರ ಮೆರವಣಿಗೆ ಮಾಡಿಸಿದ್ದರು. ನಾನು ಕೂಡ ಮನೆಯಿಂದ ತಾಳ ತೆಗೆದುಕೊಂಡು ಹೋಗಿ ಭಾಗವಹಿಸಿದ್ದೆ. ಇದರ ಹಿಂದಿನ ರಾಜಕೀಯ ಅವತ್ತು ಅರ್ಥ ಆಗುತ್ತಿರಲಿಲ್ಲ. ಆದರೆ ಹಿಂದೂಗಳ ದೇಶದಲ್ಲಿ ಮರ್ಯಾದಾ ಪುರುಷೋತ್ತಮನಿಗೆ ಮಂದಿರ ಇಲ್ಲವೇ ಎಂದು ಭಾಷಣ ಕೇಳಿದರೆ ಹೌದಲ್ಲ ತಾರ್ಕಿಕ ವಾಗಿ ಸರಿಯಿದೆ ಎನಿಸುತ್ತಿತ್ತು..

ಆದರೆ ಟಿ ವಿ ನ್ಯೂಸ್ ಚಾನೆಲ್ ಗಳು ಇರದೇ ಇದ್ದ ಕಾಲದಲ್ಲಿ ರಾಮನ ಹೋರಾಟವನ್ನು ಮನೆ ಮನೆಗೆ ತಲುಪಿಸಿದ್ದು ವಿಶ್ವ ಹಿಂದೂ ಪರಿಷತ್ತಿನ ಕಾರ್ಯಕರ್ತರು ತರುತ್ತಿದ್ದ ವಿಡಿಯೋ ಕ್ಯಾಸೆಟ್ ಗಳು. ಮನೆ ಹತ್ತಿರ ಯಾರಾದರೂ ಟಿ ವಿ ಇದ್ದವರ ಮನೆಯಲ್ಲಿ ವಿಸಿಆರ್ ಬಾಡಿಗೆ ತಂದು ಜೈನ್ ಟಿ ವಿ ಅವರು ನಿರ್ಮಿಸಿದ ವಿಡಿಯೋಗಳು ಉತ್ತರ ಪ್ರದೇಶದ ಪೂರ್ತಿ ಚಿತ್ರಣ ಕೊಡುತ್ತಿದ್ದವು. ಅಡ್ವಾಣಿ, ಅಟಲ್ ಜಿ, ಉಮಾ ಭಾರತಿ, ಕಲ್ಯಾಣ ಸಿಂಗ್, ಅಶೋಕ ಸಿಂಘಾಲ, ವಿನಯ ಕಟಿಯಾರ್ ರನ್ನು ಮೊದಲು ನೋಡಿದ್ದು ಅದೇ ವಿಡಿಯೋ ಕ್ಯಾಸೆಟ್ ಗಳಲ್ಲಿ. ಆ ಕ್ಯಾಸೆಟ್ ಗಳು ಮನೆ ಮನೆಗೆ ರಾಮನನ್ನು ತಲುಪಿಸಿದ್ದವು. ಆಗಷ್ಟೇ ದೂರ ದರ್ಶನದಲ್ಲಿ ರಾಮಾಯಣ ನೋಡಿದ್ದರಿಂದ ಸಹಜವಾಗಿ ಭಾವನೆಗಳು ತಾರಕಕ್ಕೆ ಏರುತ್ತಿದ್ದವು.

ರಾಮ ಮಂದಿರದ ರಥ ಯಾತ್ರೆ ಯಿಂದ ಸ್ಪೂರ್ತಿ ಗೊಂಡು ಮುರಳಿ ಮನೋಹರ ಜೋಶಿ ಆರಂಭಿಸಿದ ಯಾತ್ರೆ ಹುಬ್ಬಳ್ಳಿ ಯಲ್ಲಿ ರಾಷ್ಟ್ರ ಧ್ವಜ ಹೋರಾಟವನ್ನು ರೂಪಿಸಿತ್ತು. ಅನಂತ ಕುಮಾರ ಹೆಗಡೆ, ಪ್ರಹ್ಲಾದ ಜೋಶಿ, ಅರವಿಂದ ಲಿಂಬಾವಳಿ, ರವಿಕುಮಾರ ಇವರೆಲ್ಲ ನಾಯಕರಾಗಿ ರೂಪುಗೊಂಡು ಜನರಿಗೆ ತಲುಪಿದ್ದು ಇದೇ ಹೋರಾಟದ ಕಾರಣ ದಿಂದ. ಅಯೋಧ್ಯೆಯ ಹೋರಾಟ ಮತ್ತು ಈದಗಾ ಮೈದಾನದ ಹೋರಾಟಗಳು ಹುಬ್ಬಳ್ಳಿ ಮತ್ತು ಮುಂಬೈ ಕರ್ನಾಟಕದ ಭಾಗದಲ್ಲಿ ಹಿಂದುತ್ವದ ಭಾವನೆಗಳನ್ನು ಕೆರಳಿಸಿದ್ದವು.

ಅವತ್ತು ಡಿಸೆಂಬರ್ 6 1992. ಹುಬ್ಬಳ್ಳಿಯಲ್ಲಿ ಮೊದಲ ಬಾರಿಗೆ ರಣಜಿ ಮ್ಯಾಚು ಏರ್ಪಾಡಾಗಿತ್ತು. ರಣಜಿಗೆ ಸುನಿಲ್ ಜೋಶಿ ಪಾದಾರ್ಪಣೆ ಅವತ್ತು.ನೆಹರು ಮೈದಾನದಲ್ಲಿ ರಾಹುಲ್ ದ್ರಾವಿಡ್, ವೆಂಕಟೇಶ್ ಪ್ರಸಾದ್ , ರಘುರಾಮ್ ಭಟ್, ಬ್ರಜೇಶ ಪಟೇಲ್ ಕರ್ನಾಟಕದ ಪರವಾಗಿ ಆಡುತ್ತಿದ್ದರು. ಒಮ್ಮೆಲೇ ಮೈದಾನಕ್ಕೆ ಬಂದ ಪೊಲೀಸರು ಪಂದ್ಯ ರದ್ದು ಪಡಿಸಲು ಹೇಳಿದರು. ಊರಲ್ಲಿ ಅಂಗಡಿ ಮುಗ್ಗಟ್ಟು ಗಳು ಬಂದ ಆಗಿದ್ದವು. ನೆಹರು ಮೈದಾನ ದಿಂದ ಅರವಿಂದ ನಗರದವರೆಗೆ ನಡೆದು ಕೊಂಡು ಬಂದಾಗ ಗಲ್ಲಿ ಗಲ್ಲಿ ಗಳಲ್ಲಿ ಪೊಲೀಸರು. ಚನ್ನ ಪೇಟೆಯಲ್ಲಿ ಪತೆಗಾರ, ಸ್ವಕುಳ ಸಾಲಿ ಸಮುದಾಯದ ಹುಡುಗರು ಸಿಹಿ ಹಂಚುತ್ತಿದ್ದರೆ ಎದುರುಗಡೆಯ ಮುಸ್ಲಿಂ ಬಾಹುಳ್ಯದ ರಸ್ತೆಗಳಲ್ಲಿ ಮೌನ. ಸ್ವಲ್ಪ ಪೊಲೀಸರು ಆ ಕಡೆ ತಿರುಗಿದರೆ ಗಲಾಟೆ ಆಗುತ್ತದೆ ಎಂಬುದು ನಮ್ಮ ಅರಿವಿಗೂ ಬರುತ್ತಿತ್ತು.ಆದರೆ ಒಮ್ಮೆ ಮನೆ ಸೇರಿದಾಗ ನಂತರ ಕರ್ಫ್ಯೂ ಹಾಕಲಾಗಿದೆ ಮನೆಯಿಂದ ಹೊರಗೆ ಬರಬೇಡಿ ಎಂದು ಪೊಲೀಸ ಜೀಪ್ ಗಳು ಕೂಗುತ್ತಾ ಹೋಗುತ್ತಿದ್ದವು. ಕರ್ಫ್ಯೂ ನಲ್ಲಿ ಮನೆ ಎದುರು ಹಾಫ್ ಪಿಚ್ ಕ್ರಿಕೆಟ್ ಆಡಿದ್ದೆ ಆಡಿದ್ದು.ಪೊಲೀಸ ಜೀಪ್ ಸಪ್ಪಳ ಕೇಳಿದರೆ ಒಳಗಡೆ ಓಡುತ್ತಿದ್ದೆವು.ನನ್ನ ಶಾಲೆಯಲ್ಲಿ ಒಬ್ಬ ಗಾಲಿಬ್ ಎಂಬ ಗೆಳೆಯನಿದ್ದ ; ಆತ ನನಗೆ ಬಹುತ್ ಗಲತ್ ಹೂವಾ ಪ್ರಶಾಂತ ಎಂದೆಲ್ಲ ಹೇಳುತ್ತಿದ್ದ ನೆನಪು.ಆದರೆ ಮಸೀದಿ ಬೀಳಿಸಿದ್ದು ಹಿಂದೂ ಗಳಲ್ಲಿ ವಿಜಯೋತ್ಸವಕ್ಕೆ ಕಾರಣವಾಗಿತ್ತು. ಕಾನೂನು, ಸುಪ್ರೀಂ ಕೋರ್ಟ್, ಜಾತ್ಯಾತೀತತೆ ಇವೆಲ್ಲ ಅರ್ಥ ಆಗುತ್ತಿರಲಿಲ್ಲ ಆಗ.ಆದರೆ ದಂಗೆ ಗಳು ಒಳ್ಳೆಯದಲ್ಲ ಎಂಬುದಷ್ಟೇ ಅರ್ಥವಾಗುತ್ತಿತ್ತು.

ಮುಂದೆ 2010 ರಲ್ಲಿ ಅಲಹಾಬಾದ್ ಹೈ ಕೋರ್ಟ್ ನ ತೀರ್ಪು ಬರುವ ಮುಂಚೆ ಅಯೋಧ್ಯೆಗೆ ಹೋದಾಗ ಕಾರಸೇವಕ ಪುರಂ ನಲ್ಲಿ ಎರಡು ಗಂಟೆ ನಿಂತು ಹುಬ್ಬಳ್ಳಿಯಿಂದ ಬಂದ ಇಟ್ಟಿಗೆ ಇದೆಯಾ ಎಂದು ಹುಡುಕಾಡಿದ್ದೆ.ಆದರೆ ಅದು ಸಿಕ್ಕಿರಲಿಲ್ಲ. ಆದರೆ ಕನ್ನಡದಲ್ಲಿ ಶ್ರೀ ರಾಮ ಎಂದು ಬರೆದ ಇಟ್ಟಿಗೆಗಳು ನೋಡಲು ಸಿಕ್ಕಿದ್ದವು.

ಇವತ್ತು ಎಲ್ಲವೂ ಸುಖಾಂತ್ಯವಾಗಿ ರಾಮ ಮಂದಿರಕ್ಕೆ ಅಡಿಗಲ್ಲು ಹಾಕಲಾಗುತ್ತಿದೆ.ತುರ್ತು ಪರಿಸ್ಥಿತಿ ಹೋರಾಟ ನಡೆದಾಗ ನಾವಿನ್ನೂ ಹುಟ್ಟಿರಲಿಲ್ಲ.ಆದರೆ ಅಯೋಧ್ಯೆ ಹೋರಾಟ ನಮ್ಮ ನೆನಪಿನಲ್ಲಿ ಮುಸುಕು ಮುಸುಕಾಗಿ ಯಾವತ್ತೂ ಇರಲಿದೆ. ಆಂದೋಲನಗಳು ಚಳುವಳಿಗಳು ವರ್ತಮಾನದಲ್ಲಿ ಸಾಮಾಜಿಕ ಮತ್ತು ರಾಜಕೀಯ ಅರಿವನ್ನು ಹೆಚ್ಚಿಸುತ್ತವೆ. ಅಷ್ಟೇ ಅಲ್ಲ ಸಮಾಜಕ್ಕೆ ಪ್ರಬುದ್ಧ ನಾಯಕರನ್ನು ಕೂಡ ಕೊಡುತ್ತವೆ ಅನಿಸುತ್ತದೆ. ಆದರೆ ಚಳುವಳಿಯಲ್ಲಿ ಭಾಗವಹಿಸಿದ ಭಾವನಾತ್ಮಕ ನಾಯಕರು ಎಲ್ಲರೂ ಒಳ್ಳೆಯ ಆಡಳಿತಗಾರರೇ ಆಗುತ್ತಾರೆ ಎಂದೇನೂ ಇಲ್ಲ. *



**ಪ್ರಶಾಂತ ನಾತು**
ಪತ್ರಕರ್ತರು ಮತ್ತು ಮಾಧ್ಯಮ ಸಂವಹನಕಾರರು

## ಕರ್ನಾಟಕದಲ್ಲಿ ರಥ ಯಾತ್ರೆ

ಕರ್ನಾಟಕದಲ್ಲಿ ಬಿಜೆಪಿಯ ಯಡಿಯೂರಪ್ಪ- ಅನಂತ ಕುಮಾರ ಜೋಡಿಗೆ ಅಡ್ವಾಣಿ ರಥ ಯಾತ್ರೆ, ಒಂದು ರಾಜಕೀಯ ಅವಕಾಶ ಕೊಟ್ಟಿತ್ತು. ಅನಂತ ಕುಮಾರ ಹೇಳುತ್ತಿದ್ದ ಪ್ರಕಾರ ಪೂರ್ತಿ ದಿನ ರಥದ ಮೇಲೆ ನಿಲ್ಲುತ್ತಿದ್ದ ಅಡ್ವಾಣಿ ಅವರು ರಥದ ಒಳಗಡೆ ಶೌಚಾಲಯ ಇರದೇ ಇದ್ದುದ್ದರಿಂದ ತುಂಬಾ ಕಡಿಮೆ ನೀರು ಕುಡಿಯುತ್ತಿದ್ದರು. ಹೋದಲ್ಲೆಲ್ಲ ಸ್ಥಳೀಯ ತಿಂಡಿ ತಿನಿಸು ತರಿಸುತ್ತಿದ್ದ ವಾಜಪೇಯಿಗೆ ವ್ಯತಿರಿಕ್ತವಾಗಿ ಅಡ್ವಾಣಿ ಬೆಳಿಗ್ಗೆ ಎರಡು ಬ್ರೆಡ್ ತಿಂದರೆ ಮಧ್ಯಾಹ್ನ ಒಂದು ಚಪಾತಿ ತಿನ್ನುತ್ತಿದ್ದರಂತೆ. ಆ ಯಾತ್ರೆಯಲ್ಲಿ ರಾಜ್ಯದಲ್ಲಿ ಅಡ್ವಾಣಿ ಜೊತೆಗಿದ್ದ ರಾಜೇಂದ್ರ ಗೋಖಲೆ ಪ್ರಕಾರ " ಹುಬ್ಬಳ್ಳಿ ಗೆ ಬಂದಾಗ ರಾತ್ರಿ ಅಡ್ವಾಣಿ ಅವರಿಗೆ ತುರ್ತಾಗಿ ಫಾಕ್ಸ್ ಮಾಡಬೇಕಾಯಿತಂತೆ. ಕೊನೆಗೆ ಎಲ್ಲೆಲ್ಲೋ ಹುಡುಕಾಡಿ ನಾನಭಾಯಿ ಕರ್ವಾ ಮನೆಯಿಂದ ಮಷಿನ್ ತಂದು ಕೊಡಲಾಯಿತಂತೆ. 62 ರ ವಯಸ್ಸಿನಲ್ಲೂ ಉತ್ಸಾಹಿಯಾಗಿದ್ದ ಅಡ್ವಾಣಿ ಬೆಳಿಗ್ಗೆ ಹೇಳಿದ ಸಮಯಕ್ಕೆ ಸರಿಯಾಗಿ ತಯಾರಾಗಿ ಬಂದು ಕೂರುತ್ತಿದ್ದರಂತೆ. ರಥದ ಡೀಸೆಲ್ ಕಾರಗಳು ಮತ್ತು ಊಟ ವಸತಿ ಯ ಮೇಲ್ವಿಚಾರಣೆ ಪ್ರಮೋದ ಮಹಾಜನ್ ರದ್ದು. ಅಂದ ಹಾಗೆ ಆಗ ರಥ ಯಾತ್ರೆಯಲ್ಲಿ ಕರ್ನಾಟಕ ಬಿಜೆಪಿ ಬಳಿ ಯಡಿಯೂರಪ್ಪನವರದ್ದೂ ಸೇರಿದಂತೆ ನಾಲ್ಕು ಅಂಬಾಸೆಡೆರ್ ಕಾರುಗಳಿದ್ದವಂತೆ. *

# ನಿಮ್ಮ ಪತ್ರಗಳು

ನಮಸ್ಕಾರ

'ಅನಂತ ಪಥ' ಇ-ಪೇಪರ್ ನೋಡಿದೆ. ಸುಂದರ ವಿನ್ಯಾಸದಿಂದ ಮೂಡಿಬಂದಿದೆ.

ಅಭಿನಂದನೆಗಳು.

ಇದರಲ್ಲಿ ನೇತೃತ್ವ, ವ್ಯಕ್ತಿತ್ವ, ಕರ್ತೃತ್ವ ಈ ಪದಗಳ ಪದ ಗುಚ್ಛ ನೋಡಿದೆ.

ನೇತೃತ್ವ ಮತ್ತು ಕರ್ತೃತ್ವ ಇವು ವ್ಯಕ್ತಿತ್ವದಲ್ಲಿ ಸಮಾಹಿತವಾಗಿರುತ್ತವೆ, ಸೇರಿರುತ್ತವೆ. ಹಾಗಾಗಿ ಈ ಪದಗುಚ್ಛ ಅಷ್ಟು ಸೂಕ್ತವಾಗಿ ಕಾಣುವುದಿಲ್ಲ.

ಇದನ್ನು ದರ್ಶಿತ್ವ, ಕರ್ತೃತ್ವ, ನೇತೃತ್ವ.. ಹೀಗೆ ತೆಗೆದು ಕೊಂಡರೆ ಸೂಕ್ತವಾಗಿರುತ್ತದೆಂದು ನನ್ನ ಸಲಹೆ.

ಪದಗಳು ಇದೇ ಕ್ರಮದಲ್ಲಿ ಬರಬೇಕು. ಮೊದಲು ದರ್ಶನ, ನಂತರ ಕಾರ್ಯ, ತದನಂತರ ಮಾರ್ಗದರ್ಶನ.

ದರ್ಶನಾನುಭವದ ಬೆಳಕಿನಲ್ಲಿ ಕಾರ್ಯಾನುಭವ ಹೊಂದಿ, ತದನಂತರ ನೇತೃತ್ವ ನಿಡುವುದು ಸೂಕ್ತವಾಗಿರುತ್ತದೆ.

ಅದನ್ನು ನೀವು ಈಗಾಗಲೇ ಮಾಡುತ್ತಿದ್ದೀರಿ.

ಪ್ರಸ್ತುತಿ ಕೂಡ ಹಾಗೇ ಆಗಲಿ. ಎಂಬುದು ನನ್ನ ಅನಿಸಿಕೆ.

ಶುಭಾಶಯಗಳೊಂದಿಗೆ.



**ಜಿ. ಆರ್. ಜಗದೀಶ್**
ವಿದ್ಯಾಭಾರತಿ ಕರ್ನಾಟಕ,# 55,
ಯಾದವ ಸ್ಮೃತಿ 1ನೇ ಮುಖ್ಯ ರಸ್ತೆ
ಶೇಷಾದ್ರಿಪುರಂ ಬೆಂಗಳೂರು 560 020

ಮಾನ್ಯರೆ "ಅನಂತಪಥ" ಪತ್ರಿಕೆ ಅರ್ಥಪೂರ್ಣವಾಗಿ, ಸಾಕಷ್ಟು ಮಾಹಿತಿಯನ್ನೊಳಗೊಂಡು ತುಂಬಾ ಚೆನ್ನಾಗಿ ಮೂಡಿಬಂದಿದೆ. ಓದುತ್ತಿದ್ದರೆ ಅದರ ಅನುಭವ ಅಸದಳ. ಈ ವಿಶೇಷ ಪತ್ರಿಕೆ ನಿತ್ಯ ನೂತನವಾಗಿ ಅನಂತವಾಗಿ ಮುನ್ನಡೆಯಲಿ ಎಂದು ಆಶಿಸುತ್ತೇವೆ. ವಂದನೆಗಳು.

**ಲೀಲಾ ಬಸವರಾಜ**

My hearty congratulations to Ananthkumar Pratishthana and Smt. Tejaswini AnanthKumar madam for the launch of ಅನಂತಪಥ news letter.The content and blend of topics are really impressing. News letter is classy and truly professional. I will be very happy to recieve this on continuous basis.Also congratulations to Sri. T. S. Gopal Sir for the excellent text compilation.

Regards
**Dr. S. Raghavendra Prasad**
Chairman and Managing Trustee
Sahabalve Samsthe

ಅನಂತಕುಮಾರ್ ಅವರು ಕೇಂದ್ರ ಸಚಿವರಾದರೂ ಸಾಮಾನ್ಯರಂತೆಯೇ ಇದ್ದರು ಎಂಬುದು ಸತ್ಯವಾದ ಮಾತು . ಅವರ ನಿಧನಕ್ಕೂ ಕೆಲವೇ ತಿಂಗಳು ಮುಂಚೆ ನನಗೆ ಅವರನ್ನು ಕಾಣುವ ಸಂದರ್ಭ ಒದಗಿಬಂದಿತ್ತು. ಅನಂತಕುಮಾರ್ ಅವರು ಸ್ನೇಹಿತರೊಡನೆ ನಾನು . ಕಾರ್ಯ ನಿಮಿತ್ತ ದೆಹಲಿಗೆ ಹೋಗಿದ್ದಾಗ ಅವರು ನಮ್ಮನ್ನು ಆದರದಿಂದ ಬರಮಾಡಿಕೊಂಡರು.ನಮ್ಮೊಡನೆ ಬಹಳ ಹೊತ್ತು ಮಾತನಾಡುತ್ತ , ತಮ್ಮ ಕಛೇರಿ ಕಡತಗಳಿಗೂ ಸಹಿ ಹಾಕುತ್ತ ತಮ್ಮ ಹಾಸ್ಯಚಟಾಕಿಗಳೊಂದಿಗೆ ನಮ್ಮನ್ನು ಸಂತೋಷಪಡಿಸಿದರು. ತಮ್ಮ ದಿನನಿತ್ಯದ ಚಟುವಟಿಕೆಗಳನ್ನು ತಿಳಿಸುತ್ತ, ಕೇಂದ್ರ ಸಚಿವರಾಗಿದ್ದರೂ ತಾವು ಮೆಟ್ರೋದಲ್ಲಿ ಓಡಾಡುತ್ತಿರುವುದಾಗಿ ತಿಳಿಸಿದರು. ಸದಾ ಸರಳ ವ್ಯಕ್ತಿತ್ವದ ಅನಂತಕುಮಾರ್ ಅವರು ಎಂದಿಗೂ ಹುದ್ದೆಗಾಗಿ ಕಾರ್ಯ ನಿರ್ವಹಿಸದೆ, ದೇಶದ ಅಭಿವೃದ್ಧಿಗಾಗಿ ತಮ್ಮದೇ ಆದ ವಿಚಾರಗಳನ್ನು ಅನುಷ್ಠಾನಗೊಳಿಸಿದವರು. ಇಂತಹ ಅಪರೂಪದ ವ್ಯಕ್ತಿ ನಮ್ಮೊಡನೆ ಇನ್ನೂ ಹಲವಾರು ವರ್ಷಗಳ ಕಾಲ ಇರಬೇಕಿತ್ತು ಎಂಬುದು ನನ್ನ ಆಶಯ .

**ಚಿದಂಬರ ಪಿ. ನಿಂಬರಗಿ**
ಅಧ್ಯಕ್ಷರು, ಶ್ರೀ ಶಿವಚಿದಂಬರ ಶಿಕ್ಷಣ ಗ್ರಾಮೀಣಾಭಿವೃದ್ಧಿ ಸಂಸ್ಥೆ (ರಿ)
ಶಿರೋಳ, ತಾ|| ನರಗುಂದ, ಗದಗ ಜಿಲ್ಲೆ

೧೯೯೮ರ ಸೆಪ್ಟೆಂಬರ್ ತಿಂಗಳಿನಲ್ಲಿ ಬೆಂಗಳೂರಿನಿಂದ ಕಾಶಿಗೆ ಕರ್ನಾಟಕದ ೩೫ ಮಂದಿ ಯಾತ್ರಿಗರು ಭಾಗೀರಥಿ ಟ್ರಾವೆಲ್ಸ್ ಮೂಲಕ ಪ್ರವಾಸ ಕೈಗೊಂಡಿದ್ದರು. ಸೆಪ್ಟೆಂಬರ್ ೨೯ರಂದು ಬೆಳಗ್ಗೆ ೧೧ ಗಂಟೆಗೆ ಕಾಶಿಯಿಂದ ವ್ಯಾಸ ಕಾಶಿಗೆ ದೋಣಿಯಲ್ಲಿ ಹೊರಟಾಗ ಗಂಗಾನದಿಯಲ್ಲಿ ದೋಣಿ ಮಗುಚಿ ೧೬ ಮಂದಿ ಅಸುನೀಗಿದರು.

ಇವರಲ್ಲಿ ೫ ಮಂದಿ ನಮ್ಮ ಕುಟುಂಬದವರೇ ಆಗಿದ್ದರು. ನನ್ನ ತಂದೆ ಕೋಲಾರ ಸತ್ಯನಾರಾಯಣಶಾಸ್ತ್ರಿ , ನನ್ನ ತಾಯಿ ಮಣಿಕುಂಡಲಂ ಸಾವಿತ್ರಮ್ಮ, ನನ್ನ ತಮ್ಮ ಬಾಲಸುಬ್ರಮಣ್ಯ , ನನ್ನ ಭಾವಂದಿರಾದ ಮುಡಿಯಮಾರು ಪಟ್ಟಾಭಿರಾಮಯ್ಯ ಹಾಗು ಬಿ. ಎನ್. ಸತ್ಯನಾರಾಯಣ - ಇವರೇ ಮೃತಪಟ್ಟ ದುರ್ದೈವಿಗಳು. ದುರ್ಘಟನೆಯ ಸುದ್ದಿ ತಿಳಿದ ಕೂಡಲೇ ನಾವುಗಳು ವಾರಾಣಸಿ ಗೆ ಹೋದೆವು. ಅಲ್ಲಿಗೆ ತಲುಪುವುದಕ್ಕೇ ೨ ದಿನಗಳಾದವು. ನನ್ನ ತಂದೆ- ತಾಯಿ ಮತ್ತು ಭಾವನವರ ಅಂತ್ಯಸಂಸ್ಕಾರವನ್ನು ಕಾಶಿಯಲ್ಲಿ ವೇದೋಕ್ತವಾಗಿ ನೆರವೇರಿಸಿದೆವು.

ಈ ಸಂದರ್ಭದಲ್ಲಿ ಅನಂತಕುಮಾರ್ ಅವರು ವಾಜಪೇಯಿ ಸರ್ಕಾರದಲ್ಲಿ ನಾಗರಿಕ ವಿಮಾನಯಾನ ಸಚಿವರಾಗಿದ್ದರು. ನನ್ನ ತಂದೆಗೆ ಪರಿಚಿತರಾಗಿದ್ದ ಅನಂತಕುಮಾರ್ ಅವರು ಈ ಸಂದರ್ಭದಲ್ಲಿ ನೆರವಾಗಿದ್ದನ್ನು ಮರೆಯಲಾಗದು.

ನಮ್ಮ ಕರೆಗೆ ಸ್ಪಂದಿಸಿದ ಅನಂತಕುಮಾರ್ ಅವರು ಕೂಡಲೇ ಉತ್ತರಪ್ರದೇಶದ ಮುಖ್ಯಮಂತ್ರಿ ಕಲ್ಯಾಣಸಿಂಗ್ ಅವರಿಗೆ ಕರೆ ಮಾಡಿಸಿ ಮೃತರ ಅಂತ್ಯ ಸಂಸ್ಕಾರವನ್ನು ಸರಕಾರಿ ಗೌರವದೊಂದಿಗೆ ಮಾಡಿಸುವಂತೆಯೂ ಅದಕ್ಕಾಗಿ ಸೂಕ್ತ ನೆರವು ನೀಡುವಂತೆಯೂ ಸೂಚಿಸಿದರು. ಕೂಡಲೇ ಕ್ರಮಕ್ಕೆ ಮುಂದಾದ

ಉತ್ತರಪ್ರದೇಶದ ಸರ್ಕಾರವು ಮೃತರ ಅಂತ್ಯಸಂಸ್ಕಾರಕ್ಕಾಗಿ ಒಂದು ಟ್ರಾಕ್ಟರ್, ೨೦ ಕೆಜಿ ಶ್ರೀಗಂಧದ ಚಕ್ಕೆಯನ್ನು ಕೊಟ್ಟು ಸಕಲ ಸರ್ಕಾರೀ ಗೌರವದೊಂದಿಗೆ ಅಂತ್ಯಸಂಸ್ಕಾರ ನೆರವೇರಲು ಸಹಕಾರ ನೀಡಿತು.

ಅಂತ್ಯಸಂಸ್ಕಾರದ ನಂತರ ವಾರಣಾಸಿಯ ಜಿಲ್ಲಾಧಿಕಾರಿಗಳನ್ನು ಅನಂತಕುಮಾರ್ ಅವರು ಸಂಪರ್ಕಿಸಿ ಮರಣ ಪತ್ರಗಳು ಶೀಘ್ರವಾಗಿ ದೊರೆಯುವಂತೆ ಮಾಡಿದರು.

ಊರಿಗೆ ಹಿಂತಿರುಗಲು ಪರದಾಡುತ್ತಿದ್ದಾಗ ಅನಂತಕುಮಾರ್ ಅವರೇ ರೈಲ್ವೆ ಮಂತ್ರಿ ನಿತೀಶ್ ಕುಮಾರ್ ಅವರಿಗೆ ಕರೆ ಮಾಡಿ ಗೋರಖ್ ಪುರದಿಂದ ಬೆಂಗಳೂರಿಗೆ ಹೊರಡುವ ರೈಲಿಗೆ ಮತ್ತೊಂದು ಪ್ರತ್ಯೇಕ ಬೋಗಿಯನ್ನು ಸೇರಿಸಿ ಮೃತರ ಕುಟುಂಬದವರು ಬೆಂಗಳೂರಿಗೆ ಸುರಕ್ಷಿತವಾಗಿ ತಲುಪಲು ನೆರವಾದರು. ಕಾಣದ ದೂರದ ಊರಿನಲ್ಲಿ, ದುರ್ಘಟನೆಯ ಸಂದರ್ಭದಲ್ಲಿ ಅವರು ಮಾಡಿದ ಸಹಾಯ ಅನನ್ಯವಾದುದು. ಅನಂತಕುಮಾರರ ನೆನಪು ಎಂದಿಗೂ ಮರೆಯಲಾಗದ್ದು. ಇಂತಹ ಪರೋಪಕಾರಿಗೆ ನಮ್ಮ ಕುಟುಂಬ ಸದಸ್ಯರ ಪರವಾಗಿ ಅನಂತ ಕೃತಜ್ಞತೆಗಳನ್ನು ಈ ಮೂಲಕ ವಿನಮ್ರವಾಗಿ ಸಲ್ಲಿಸಿರುವೆ.

**ಗೊಲ್ಲಾಪಿನ್ನಿ ರಾಮಮೂರ್ತಿ ಕೋಲಾರ**
ನಿವೃತ್ತ ಉಪನ್ಯಾಸಕರು, ಬೆಂಗಳೂರು

ಪ್ರತಿಷ್ಠೆ , ಸ್ವಜನ ಪಕ್ಷಪಾತ , ಭ್ರಷ್ಟಾಚಾರದಿಂದ ಕೂಡಿರುವ ಇಂದಿನ ಸರ್ಕಾರದಲ್ಲಿ ಶ್ರೀಯುತ ಅನಂತಕುಮಾರ್ ಅವರ ಹೆಸರು ಹೊರತಾದದ್ದು. ರಾಜ್ಯ ಮತ್ತು ಕೇಂದ್ರದ ಸಂಪರ್ಕ ಸೇತುವಾಗಿ ಕರ್ನಾಟಕ ರಾಜ್ಯದ ಸರ್ವತೋಮುಖ ಅಭಿವೃದ್ದಿಗೆ ಪಕ್ಷಾತೀತವಾಗಿ ದುಡಿದವರು ಅನಂತಕುಮಾರ್.

ಬೆಂಗಳೂರು ಮಾಹಿತಿ ತಂತ್ರಜ್ಞಾನ ನಗರವಾಗಿ ಬೆಳೆದು ಪ್ರಪಂಚದಲ್ಲಿ ಮಹತ್ವದ ನಗರವಾಗಿ ಬೆಳವಣಿಗೆ ಹೊಂದಲು ಅಂದಿನ ಮುಖ್ಯಮಂತ್ರಿ ಎಸ್ .ಎಂ ಕೃಷ್ಣ ಹಾಗು ಕೇಂದ್ರ ಸಚಿವರಾಗಿದ್ದ ಅನಂತಕುಮಾರರ ಪಾತ್ರ ಮಹತ್ವದ್ದು. ಅಂದಿನ ಸಂಧರ್ಭದಲ್ಲಿ ರಾಜ್ಯವು ಕೇಂದ್ರದೊಂದಿಗೆ ಉತ್ತಮವಾದ ಬಾಂಧವ್ಯವನ್ನು ಹೊಂದಲು ಅನಂತಕುಮಾರ್ ಪ್ರಮುಖ ಕೊಂಡಿಯಾಗಿದ್ದರು. ಪಕ್ಷ ಯಾವುದಾದರೇನು, ಅಭಿವೃದ್ದಿಯೇ ಮುಖ್ಯ ಎಂದು ತಿಳಿದವರು ಅವರು.

ದಿನನಿತ್ಯ ನಾವು ಗಮನಿಸಿದಂತೆ ಇಂದಿನ ಪ್ರತಿಷ್ಠೆಯ ರಾಜಕಾರಣದಲ್ಲಿ ಈ ಬಗೆಯ ವ್ಯಕ್ತಿತ್ವಗಳು ಅಪರೂಪವೇ ಸರಿ.

ಅನಂತಪಥ ಪತ್ರಿಕೆಯು ಅನಂತಕುಮಾರರ ವ್ಯಕ್ತಿತ್ವವನ್ನು ಓದುಗರಿಗೆ ಪರಿಚಯಿಸುವ ಉತ್ತಮ ಪ್ರಯತ್ನವಾಗಿದೆ. ಅನಂತಕುಮಾರರ ವ್ಯಕ್ತಿತ್ವ, ನಡವಳಿಕೆ, ಕಾರ್ಯ ವೈಖರಿ, ಸಾಮಾಜಿಕ ಪ್ರಜ್ಞೆ , ಸಾಮಾಜಿಕ ಕೈಂಕರ್ಯ ಹಾಗು ಪರಿಸರ ಪ್ರಜ್ಞೆ ಹಾಗು ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಅವರನ್ನು ಹತ್ತಿರದಿಂದ ಕಂಡವರ ಬರವಣಿಗೆಗಳು ಅನಂತಕುಮಾರರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಜೊತೆಗೆ ಸಂದರ್ಭಕ್ಕೆ ತಕ್ಕಂತೆ ಮೆರುಗು ನೀಡುವ ಸುಂದರವಾದ ಚಿತ್ರಗಳೊಂದಿಗೆ ಈ ನಿಯತಕಾಲಿಕದ ವಿನ್ಯಾಸ ಅತ್ಯುತ್ತಮವಾಗಿ ಮೂಡಿ ಬಂದಿದೆ.

**ಬೈಚಕುಪ್ಪೆ ನಾಗೇಂದ್ರ**
ತಾವರೆಕೆರೆ, ಬೆಂಗಳೂರು

## ನೆನಪಿನ ಪುಟಗಳಿಂದ

# ಮೊಮ್ಮಗನಲ್ಲಿ ಮೈಗೂಡಿದ ತಾತನ ಮೇಧಾಶಕ್ತಿ

ಅನಂತಕುಮಾರ್ ನನ್ನ ಸೋದರಮಾವನಾದ ಶ್ರೀ ನಾರಾಯಣ ಶಾಸ್ತ್ರಿಗಳ ಮಗ. ನನ್ನ ತಾಯಿ ಶ್ರೀಮತಿ ಲಕ್ಷ್ಮೀನರಸಮ್ಮ ನವರು ಶಾಸ್ತ್ರಿಗಳ ಸೋದರಿ. ನನಗೂ ನನ್ನ ಸೋದರಮಾವನಾರಾಯಣ ಶಾಸ್ತ್ರಿಗೂ ವಯಸ್ಸಿನ ಅಂತರ ಬಹಳ ಕಡಿಮೆಯಾದ ಕಾರಣ ನಮ್ಮಿಬ್ಬರ ಬಾಂಧವ್ಯಕ್ಕಿಂತಲೂ ಗೆಳೆತನವೇ ಮಿಗಿಲಾಗಿತ್ತು. ಜೊತೆಗೆ ನಮ್ಮದು ಅವಿಭಕ್ತ ಕುಟುಂಬವಾದ ಕಾರಣ ಚಿಕ್ಕಂದಿನಿಂದಲೇ ಅಂದರೆ ಪ್ರಾಥಮಿಕ ವ್ಯಾಸಂಗದಿಂದ ಕಾಲೇಜು ಶಿಕ್ಷಣದವರೆಗೂ ಜೊತೆಜೊತೆಯಲ್ಲಿ ಬೆಳೆದು ೧೯೫೩ರಲ್ಲಿ ಪದವೀಧರರಾದೆವು.

ಅದೇ ವರ್ಷ ನಾನು ಹೈದ್ರಾಬಾದಿಗೆ ಉದ್ಯೋಗ ನಿಮಿತ್ತ ಹೊರಟೆನು.ನಮ್ಮ ಮಾವ ಮೈಸೂರಿನಲ್ಲಿ ರೈಲ್ವೆ ಅಕೌಂಟ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಉದ್ಯೋಗಕ್ಕೆ ಸೇರಿಕೊಂಡರು. ೧೯೫೩ ರಿಂದ ೧೯೬೧ ರವರೆಗೆ ಕಾರಣಾಂತರಗಳಿಂದ ನಾನು ಮೈಸೂರಿಗೆ ಬರಲಿಲ್ಲ. ಈ ಅವಧಿಯಲ್ಲಿ ನಮ್ಮ ಮಾವನವರು ಮದುವೆಯಾಗಿ ಒಂದು ಮಗುವಿನ ತಂದೆಯಾಗಿದ್ದರು. ಆ ದಂಪತಿಗಳನ್ನು ನಾನು ಭೆಟ್ಟಿಯಾದಾಗ ಮಗುವಿಗೆ ಒಂದುವರೆ ವರ್ಷ, ಆ ಮಗುವೇ ಅನಂತಕುಮಾರ್.

೧೯೬೯ ರಲ್ಲಿ ನನಗೆ ಸಿಕಂದರಾಬಾದಿನಿಂದ ಹುಬ್ಬಳ್ಳಿಗೆ ವರ್ಗವಾಯಿತು. ಆಗ ನಮ್ಮ ಸೋದರಮಾವ ಹುಬ್ಬಳ್ಳಿಯಲ್ಲೇ ಇದ್ದರು. ಆ ವೇಳೆಗೆ ಅನಂತಕುಮಾರ್‌ಗೆ ೧೦ ವರ್ಷ. ನನಗೆ ಇಲಾಖೆಯ ವಸತಿ ವ್ಯವಸ್ಥೆ ಆಗುವವರೆಗೂ ನಾನು ೧೦-೧೫ ದಿನಗಳು ಅವರ ಮನೆಯಲ್ಲೇ ಇದ್ದೆ. ಅನಂತಕುಮಾರ್ ನನ್ನನ್ನು ತುಂಬಾ ಹಚ್ಚಿಕೊಂಡಿದ್ದು, ನನ್ನ ಪಕ್ಕದಲ್ಲೇ ಮಲಗುತ್ತಿದ್ದ. ಅವನಿಗೆ ಬಾಲ್ಯದಿಂದಲೂ ವಿಷಯಗಳನ್ನು ಸಂಗ್ರಹಿಸುವ ಆಕಾಂಕ್ಷೆ ಬಹಳವಾಗಿತ್ತು. ವಿಶೇಷವೇನೆಂದರೆ ಅವನಿಗೆ ತನ್ನಪೂರ್ವಿಕರ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಬಹಳವಾಗಿತ್ತು. ಮುಖ್ಯವಾಗಿ ಅವನ ತಾತ (ತಂದೆಯತಂದೆ) ನರಹರಿ ಶಾಸ್ತ್ರಿಗಳು ಮತ್ತು ಅಜ್ಜಿ ಅಕ್ಕಯಮ್ಮನವರ ಬಗೆಗೆ ಎಷ್ಟು ಹೇಳಿದರೂ ಆಸಕ್ತಿಯಿಂದ ಕೇಳುತ್ತಲೇ ಇರುತ್ತಿದ್ದ.

ಅವನ ತಾತ ನರಹರಿ ಶಾಸ್ತ್ರಿಗಳು ಹೆಸರಾಂತ ಜ್ಯೋತಿಷಿಗಳು. ಅನಂತಕುಮಾರ್ ಹುಟ್ಟಿದಾಗ ಗ್ರಹಗಳ ಕುಂಡಲಿಯನ್ನು ವೀಕ್ಷಿಸಿ ಈ ಮಗುವಿಗೆ ಚಕ್ರವರ್ತಿಯೋಗ ಇದೆಎಂದು ಹೇಳಿದ್ದರು. ಈ ವಿಷಯವನ್ನು ನಾನು ಹೇಳಿದಾಗಲೆಲ್ಲ ಅನಂತಕುಮಾರ್ ತುಂಬಾ ಸಂತೋಷ ಪಡುತ್ತಿದ್ದ. ಅನಂತಕುಮಾರನ ತಾತನವರು ಪ್ರಸಿದ್ಧ ಜ್ಯೋತಿಷ್ಕರಲ್ಲದೆ ವೇದ ಪಾರಂಗತರೂ ಆಗಿದ್ದರು. ಅವರ ಮೇಧಸ್ಸಿನ ಶಕ್ತಿ ಎಷ್ಟು ಅಪಾರವಾಗಿತ್ತೆಂದರೆ, ಆಧುನಿಕ ಅಣುಶಕ್ತಿಯ ಬಗ್ಗೆಯೂ ಗ್ರಹಿಸಿ ಹೇಳುತ್ತಿದ್ದರು. ಇದಲ್ಲದೆ ಅನೇಕ ಜನರ ವಿವಿಧ ಸಮಸ್ಯೆಗಳನ್ನು ಸೂಕ್ತವಾದ ಪರಿಹಾರಗಳಿಂದ ಪರಿಷ್ಕರಿಸುತ್ತಿದ್ದರು. ಅವರ ಸಲಹೆಗಳಿಗಾಗಿ ಬೆಳಗ್ಗೆಯಿಂದ ರಾತ್ರಿವರೆಗೂ ಒಬ್ಬ ಸಾಮಾನ್ಯ ವ್ಯಕ್ತಿಯಿಂದ ಹಿಡಿದು ಅನೇಕ ಗಣ್ಯವ್ಯಕ್ತಿಗಳವರೆಗೂ ಬರುತ್ತಿದ್ದರು.

ಕೊನೆಕೊನೆಗೆ ನರಹರಿಶಾಸ್ತ್ರಿಗಳು ಅನಾರೋಗ್ಯದಲ್ಲಿದ್ದರೂ ಸಹ ಯಾರೇ ಆಗಲಿ ಸಮಸ್ಯೆಯೊಂದಿಗೆ ಬಂದರೆ ಆರೋಗ್ಯವನ್ನು ಲೆಕ್ಕಿಸದೆ ಸಮಸ್ಯೆಗಳನ್ನು ಬಗೆಹರಿಸಿ ಕಳುಹಿಸುತ್ತಿದ್ದರು. ಇನ್ನು ಅನಂತಕುಮಾರ್ ಅಜ್ಜಿ ಶ್ರೀಮತಿ ಅಕ್ಕಯಮ್ಮನವರ ಬಗ್ಗೆ ಹೇಳಬೇಕೆಂದರೆ, ಆಕೆ ಒಬ್ಬದೇವತಾ ಸ್ವರೂಪಿಣಿಯೆಂದೇ ಹೇಳಬಹುದು. ಅಪಾರ ಸಹನ ಶೀಲೆಯಾದ ಆಕೆಯು ತಮ್ಮ ಮನೆಗೆ ಎಷ್ಟೇ ಜನ ಬರಲಿ ನಿಸ್ವಾರ್ಥ ಸೇವೆಯ ಪೂರ್ವಕ ಉಪಚರಿಸುತ್ತಿದ್ದರು. ಸಾಕ್ಷಾತ್ ಅನ್ನಪೂರ್ಣೆಯೇ ಆಗಿದ್ದರು ಎಂದರೂ ಸರಿಯೇ. ಇದಲ್ಲದೆ ಪತಿಯ ಅನಾರೋಗ್ಯದ ಬಗ್ಗೆ ಬಹಳ ಶ್ರದ್ಧೆ ವಹಿಸಿ, ಅತ್ಯಂತ ಆದರದಿಂದ ನೋಡಿಕೊಳ್ಳುತ್ತಿದ್ದರು. ಅಂತಹ ಸ್ತ್ರೀಮೂರ್ತಿಯನ್ನು ನಾನು ಕಂಡೇ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಈ ವಿಷಯಗಳನ್ನೆಲ್ಲಾ ನಾನು ಹೇಳುತ್ತಿದ್ದರೆ ಅನಂತಕುಮಾರ್ ಬಲು ಆಸಕ್ತಿಯಿಂದ ಕೇಳುತ್ತಿದ್ದ. ಅವನು ಹತ್ತು ವರ್ಷ ಬಾಲಕನಾಗಿದ್ದರೂ, ಅವನಿಗಿದ್ದ ವಾಗ್ಝರಿ, ಅವನ ಅಪಾರವಾದ ಗ್ರಾಹಕ ಶಕ್ತಿ, ದೇಶಭಕ್ತಿ ಇದಲ್ಲದೆ ಅವನಿಗಿದ್ದ ನಾಯಕತ್ವದ ಗುಣಗಳು ಇವೆಲ್ಲವನ್ನೂ ನೋಡಿ ನನಗೆ ಸಂತೋಷವೂ ಆಶ್ಚರ್ಯವೂ ಆಗುತ್ತಿತ್ತು.

ನಂತರ ನನಗೆ ಹುಬ್ಬಳ್ಳಿಯಿಂದ ಸಿಕಂದರಾಬಾದ್‌ಗೇ ವರ್ಗವಾಯಿತು. ನಾನು ನನ್ನ ಮಾವನ ಕುಟುಂಬದವರನ್ನು ಪುನ: ಭೆಟ್ಟಿಯಾಗಿದ್ದು ಅನಂತಕುಮಾರ್ ತಾಯಿ ಗಿರಿಜಾ ಶಾಸ್ತ್ರಿಯವರ ನಿಧನವಾದಾಗಲೇ, ಆಗ ನಾವೆಲ್ಲರು ಆಕೆಯ ವೈಕುಂಠ ಸಮಾರಾಧನೆಯಲ್ಲಿ ಕುಳಿತಿದ್ದಾಗ, ಅನಂತಕುಮಾರ್ ನನ್ನ ಹತ್ತಿರ ಬಂದುಮಾಮಾ, ಈ ವಿಷಯ ನಿಮಗೆ ತಿಳಿದಿದೆಯೇ? ನನಗೆ ಈ ಸಲ ಲೋಕಸಭಾ ಸ್ಥಾನಕ್ಕೆ ಟಿಕೇಟ್ ಕೊಟ್ಟಿದ್ದಾರೆ. ಆದರೆ ಇದನ್ನು ಕೇಳಿ ಸಂತೋಷ ಪಡಲು ಅಮ್ಮನೇ ಇಲ್ಲ'' ಎಂದು ಹೇಳಿದಾಗ ನನಗೆ ಕಣ್ತುಂಬಿ ಬಂತು.

ಅನಂತಕುಮಾರ್ ಸಂಸದನಾದ ನಂತರ ದೇವೇಗೌಡರು ಪ್ರಧಾನಿಯಾಗಿದ್ದ ಸಂದರ್ಭ. ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಸೀತಾರಾಮ ಕೇಸರಿಯವರು ಮಂಡಿಸಿದಾಗ, ಅನಂತಕುಮಾರ್ ಸುಮಾರು ೭೦ ನಿಮಿಷ ನಿರರ್ಗಳವಾಗಿ, ರಾಮಾಯಣ, ಮಹಾಭಾರತದಿಂದ ಆಯ್ದ ಉದಾಹರಣೆಗಳ ಸಮೇತ ಬಹಳ ಚೆನ್ನಾಗಿ ಮಾತನ್ನಾಡಿದ. ಅವನ ಭಾಷಣವನ್ನು ಕೇಳಿ, ನಾನು ಆನಂದ ಭರಿತನಾಗಿ ಕೂಡಲೇ ಇನ್‌ಲ್ಯಾಂಡ್ ಲೆಟರ್ ತೆಗೆದುಕೊಂಡು ನಾರಾಯಣಶಾಸ್ತ್ರಿಯವರಿಗೆ ಒಂದು ಪತ್ರ ಬರೆದೆ. ಅನಂತಕುಮಾರ್ ಮಾಡಿದ ಭಾಷಣಬಹು ಪ್ರಶಂಸಾರ್ಹವಾಗಿತ್ತೆಂದು ಮೆಚ್ಚುಗೆ ಸೂಚಿಸಿದ್ದೆ. ಶಾಸ್ತ್ರಿಗಳು ನನ್ನ ಪತ್ರವನ್ನು ಮಗನಿಗೆ ತೋರಿಸಿದರು. ಅದಕ್ಕೆ ಪ್ರತಿಸ್ಪಂದಿಸಿದ ಅನಂತಕುಮಾರ್ ನನಗೆ ಧನ್ಯವಾದ ಸೂಚಿಸಿ ಸಂಸದರ ಲೆಟರ್ ಹೆಡ್‌ನಲ್ಲಿ ಪ್ರತ್ಯುತ್ತರ ಬರೆದು ಕಳುಹಿಸಿದ್ದು ನೋಡಿ, ನನಗೆ ಪರಮಾನಂದವಾಯಿತು.

ಮುಂದೆ ಅನಂತಕುಮಾರ್ ವಾಜಪೇಯಿಯವರ ನಾಯಕತ್ವದಲ್ಲಿ ಕೇಂದ್ರದಲ್ಲಿ ನಾಗರಿಕ ವಿಮಾನಯಾನ ಖಾತೆಯ ಮಂತ್ರಿ ಆಗಿದ್ದಾಗ ಹೈದ್ರಾಬಾದ್‌ನಲ್ಲಿ ಹೊಸ ಮೇಲುಸೇತುವೆಯೊಂದರ ಉದ್ಘಾಟನೆಗಾಗಿ ಬಂದಿದ್ದ. ಆಗ ಹೈದರಾಬಾದಿನಲ್ಲೇ ಇದ್ದ ನಮ್ಮನ್ನು ಸಂಪರ್ಕಿಸುವುದನ್ನು ಮರೆಯಲಿಲ್ಲ. ತಾನು ನಮ್ಮ ಮನೆಗೆ ಬರುವುದಾಗಿ ತಿಳಿಸಿದಾಗ ನಮಗಾದ ಸಂತೋಷ ಹೇಳತೀರದು. ಆದರೆ, ತನ್ನ ಬರುವಿಕೆಯ ವಿಷಯವನ್ನು ಯಾರಿಗೂ ತಿಳಿಸಬಾರದೆಂದೂ ಹೇಳಿದ್ದ. ಪ್ರತ್ಯೇಕವಾಗಿ ನಮ್ಮ ಜೊತೆಸ್ವಲ್ಪ ಸಮಯ ಕಳೆಯಬೇಕೆಂದು ರಾತ್ರಿ ೧೧:೦೦ರ ನಂತರ ಬಂದನು. ಹಚ್ಚಿದ ಅವಲಕ್ಕಿ ತಿಂದು, ಕಾಫಿ ಕುಡಿದು ಲೋಕಾಭಿರಾಮವಾಗಿ ಮಾತಾಡುತ್ತಿದ್ದುದು ಈಗಲು ನನಗೆ ಸವಿನೆನಪಾಗಿ ಉಳಿದಿದೆ. ಎರಡು ಗಂಟೆಗಳ ಕಾಲ ನಮ್ಮಜೊತೆ ಕಳೆದು ಮರುದಿನದ ಕಾರ್ಯಕ್ರಮಗಳತ್ತ ಗಮನಹರಿಸಲು ಹೊರಟನು. ಕಾಲಾಂತರದಲ್ಲಿ ಅಂಥಗಣ್ಯ ವ್ಯಕ್ತಿಯಾಗಿದ್ದರೂ ಅವನಲ್ಲಿ ಯತ್ಕಿಂಚಿತ್ ಬದಲಾವಣೆಯೂ ಕಂಡು ಬರಲಿಲ್ಲ. ಅದೇ ನಮಗೆ ಅತ್ಯಂತ ಸಂತೋಷವನ್ನುಂಟು ಮಾಡಿತು.

ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಅನಂತ್‌ಕುಮಾರ್ ಅವರಿಗೆ, ಅವರತಾತ ಶ್ರೀ ನರಹರಿ ಶಾಸ್ತ್ರಿಗಳ ಗುಣಗಳು ಬಹಳಷ್ಟು ಮೈಗೂಡಿಕೊಂಡಿದ್ದವು.ಅದೇ ಮೇಧಸ್ಸು, ವಾಗ್ಝರಿ, ಸ್ನೇಹಶೀಲತೆ, ಜನಾಕರ್ಷಣೆ.

ಇದು ಇನ್ನೊಂದು ರೀತಿಯಲ್ಲಿ ವಿಪರ್ಯಾಸವೂ ಹೌದು. ಕಡೆಯಲ್ಲಿ ತನ್ನ ತಾತನವರ ಹಾಗೆ ಅನಾರೋಗ್ಯದಿಂದ ಇದ್ದರೂ ಲೆಕ್ಕಿಸದೆ ಅನಂತಕುಮಾರ್ ತನ್ನ ಕರ್ತವ್ಯಗಳನ್ನೆಲ್ಲ ಕೊನೆವರೆಗೂ ನಿರ್ವಹಿಸಿದನು.

೩೦-೫-೨೦೧೯. ಈ ಸಲದ ಚುನಾವಣೆಯ ನಂತರ ಎಲ್ಲರೂ ಪ್ರಮಾಣ ಸ್ವೀಕಾರ ವೀಕ್ಷಿಸುತ್ತಿದ್ದರೆ ಅನಂತ್‌ಕುಮಾರ್ ಹಿಂದಿನ ಚುನಾವಣೆಗಳ ನಂತರಹಲವು ಬಾರಿ ಪ್ರಮಾಣ ಸ್ವೀಕಾರ ಮಾಡಿದ್ದು ನೆನಪಾಯಿತು.

ಅದೇ ನೆನೆಸಿಕೊಳ್ಳುತ್ತಾ ಕಣ್ಮುಚ್ಚಿಕೊಂಡೆ. ಒಂದು ಹನಿ ಕಣ್ಣೀರುಕೈ ಮೇಲೆ ಬಿದ್ದಾಗ ಎಚ್ಚರವಾಯಿತು, ಅರಿವಾಯಿತು. ಇನ್ನು ನಮ್ಮ ಪ್ರೀತಿಯ ಅನಂತಕುಮಾರ್ ಇಲ್ಲವೆಂದು. *

**ಎಸ್. ರಾಮಮೂರ್ತಿ**
ನ್ಯೂಕಾಂತ ರಾಜ ಅರಸ್ ರಸ್ತೆ,
ಲಕ್ಷ್ಮೀಪುರಂ,ಮೈಸೂರು.



ಅನಂತಪಥ
Editor: **Gopal T.S** | Assistance: **Madhushree B A** | Sketches: **Raghupathi Sringeri**
Layout: **Abhishek Gubbi Creatives** | Inputs: **Suvasini Narayan / Thara/ Seema Killedar / PadminiRangarajan / Poornaprajna**
Photographs: **©Ananthkumar Prathishtnana**
Published by: **Dr. Tejaswini AnanthKumar**
For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04
Ph – 08026568484, Email- ananth.path@akp.org.in

**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು; ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
To get a e-version of this periodical SMS your name and place to 8884182415

## ನೆನಪಿನ ಅಂಗಳದಿಂದ

ಪಠ್ಯ-ಸಂಯೋಜನೆ: ತೇಜಸ್ವಿನಿ ಅನಂತಕುಮಾರ್

# ರಕ್ಷಾಬಂಧನ



ಅನಂತಕುಮಾರರ ಮನೆಯಲ್ಲಿ ರಕ್ಷಾಬಂಧನ ಕಾರ್ಯಕ್ರಮ ಪ್ರಾರಂಭವಾದದ್ದು ೧೯೯೮ - ೯೯ ರಲ್ಲಿ. ಆಗ ಭಾರತೀಯ ಜನತಾಪಕ್ಷದ ಕಾರ್ಯಕರ್ತೆಯಾಗಿದ್ದ ಶ್ರೀಮತಿ ಮಂಜುಳಾ ಮಿಶ್ರ ಎಂಬ ರಾಜಸ್ಥಾನಿ ಮಹಿಳೆ ಮೊದಲಬಾರಿಗೆ ೧೯೯೮ರ ರಕ್ಷಾಬಂಧನದ ಸಮಯದಲ್ಲಿ ಅನಂತಕುಮಾರರಿಗೆ ರಾಖಿ ಕಟ್ಟಿ ರಕ್ಷಾಬಂಧನ ಆಚರಿಸಬೇಕೆಂದು ತೀರ್ಮಾನಿಸಿ ಅನಂತಕುಮಾರರ ಮನೆಗೆ ಬಂದರು. ಆದರೆ ಅಂದು ಅನಂತಕುಮಾರ್ ದೆಹಲಿಯಲ್ಲಿದ್ದರು. ಅಂದೇ ಅವರು ಬೆಂಗಳೂರಿಗೇನೋ ಬರುವವರಿದ್ದರು. ಎಷ್ಟು ಹೊತ್ತಿಗೆ ಏನು ಗೊತ್ತಿರಲಿಲ್ಲ. ಅವರಿಗಾಗಿ ಕಾದು ಕುಳಿತ ಮಂಜುಳಾ ದೀದಿಯವರು ಅನಂತಕುಮಾರರಿಗೆ ರಾಖೀ ಕಟ್ಟಿದ ಹೊರತು ಏನನ್ನೂ ತಿನ್ನುವುದಿಲ್ಲವೆಂದು ವ್ರತಹಿಡಿದವರಂತೆ ಕುಳಿತುಬಿಟ್ಟಿದ್ದರು. ರಾತ್ರಿ ಒಂಬತ್ತೂವರೆಗೆ ಅನಂತ್ ಬಂದ ಅಮೇಲೆ ಅವರಿಗೆ ರಕ್ಷಾಬಂಧನ ಕಟ್ಟಿದ ಮೇಲೆಯೇ ಅವರು ಆಹಾರ ಸೇವಿಸಿದ್ದು.ಮುಂದೆ ಪ್ರತಿ ವರ್ಷ ರಾಖಿ ಹಬ್ಬದಂದು ಮಂಜುಳಾ ದೀದಿಯವರೊಡನೆ ಮಿಶ್ರರವರೊಡನೆ ಇನ್ನೂ ಹಲವರು ಬಂದು ಅನಂತಕುಮಾರರಿಗೆ ರಾಖಿ ಕಟ್ಟುವುದು ರೂಢಿಯ ಕಾರ್ಯಕ್ರಮವಾಯಿತು.೨೦೦೧ರಿಂದ ಅನಂತಕುಮಾರ್ ಅವರ ಸ್ನೇಹಿತ ಕುಟುಂಬದವರಾದ ರಜನೀಶ್ ಬನ್ಸಲ್ ಅವರ ಶ್ರೀಮತಿ ಸಂತೋಷ್ ಬನ್ಸಲ್ ಅವರು ಸಹ ರಕ್ಷಾಬಂಧನ ದಿನದಂದು ಅನಂತಕುಮಾರರಿಗೆ ರಾಖಿ ಕಟ್ಟಲು ಬರುತ್ತಿದ್ದರು. ೨೦೦೫ರಲ್ಲಿ ರಕ್ಷಾಬಂಧನ ಕಾರ್ಯಕ್ರಮ ಬೆಂಗಳೂರು ಜಯನಗರದ ವಿಜಯಾ ಕಾಲೇಜಿನ ಆವರಣದಲ್ಲಿ ನಡೆಯಿತು. ಹಸಿರು ರಕ್ಷೆ ಎಂಬ ಹೆಸರಿನಲ್ಲಿ ಗಿಡಗಳಿಗೆ ರಕ್ಷೆಯನ್ನು ಕಟ್ಟಿ ಗಿಡಗಳನ್ನು ಸಂರಕ್ಷಿಸುವುದು ಈ ಕಾರ್ಯಕ್ರಮದ ಸಂದೇಶ . ಅದಮ್ಯಚೇತನದ ಮೊದಲ ಪರಿಸರ ಕಾಳಜಿ ಕಾರ್ಯಕ್ರಮಗಳಲ್ಲಿಹಸಿರು ರಕ್ಷೆ ಮೊದಲಿನದು. ನಂತರ ಪ್ರತಿ ವರ್ಷ ರಕ್ಷಾಬಂಧನ ಕಾರ್ಯಕ್ರಮದಂದು ಕನ್ನಡ ಉಳಿಸಿ ಎಂಬಂತಹ ಒಂದೊಂದು ಸಂದೇಶವನ್ನು ನೀಡುವ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು.





ಅನಂತಕುಮಾರರಿಗೆ ರಕ್ಷಾಬಂಧನ ಕಟ್ಟಲು ಬರುತ್ತಿದ್ದವರಲ್ಲಿ ಸಾಮಾನ್ಯವಾಗಿ ಶ್ರೀಮತಿ ತಾರಾ ಮೊದಲಿಗರಾಗಿರುತ್ತಿದ್ದರು , ಡಾಕ್ಟರ್ ವಿಜಯಲಕ್ಷ್ಮಿ ಬಾಳೇಕುಂದ್ರಿ , ಶ್ರೀಮತಿ ಅನುಪಮಾ ಹೊಸಕೆರೆ, ಶ್ರೀಮತಿ ಮಾಳವಿಕ, ಶ್ರೀಮತಿ ವಿಮಲಾ ಗೌಡ ಮುಂತಾದವರು ಪ್ರತಿವರ್ಷ ತಪ್ಪದೆ ರಕ್ಷಾಬಂಧನ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿದ್ದರು. ೨೦೧೮ರ ರಕ್ಷಾಬಂಧನದ ಸಮಯದಲ್ಲಿ ಅನಂತಕುಮಾರ್ ಅವರು ಅನಾರೋಗ್ಯದಿಂದ ಹೆಚ್ಚಿನ ಚಿಕಿತ್ಸೆಗೆ ಅಮೇರಿಕಗೆ ಹೊರಟಿದ್ದ ಸಮಯ. ಅನಾರೋಗ್ಯದ ನಡುವೆಯೂ ಅನಂತಕುಮಾರ್ ಅವರು ಸಂತಸದಿಂದ ತಮ್ಮ ನಿವಾಸದಲ್ಲಿಯೇ ರಕ್ಷಾಬಂಧನದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ದುರದೃಷ್ಟವಶಾತ್ ಇದೇ ರಕ್ಷಾಬಂಧನ ಕಾರ್ಯಕ್ರಮ ಅನಂತಕುಮಾರ್ ಅವರ ಕಡೆಯ ಸಾರ್ವಜನಿಕ ಕಾರ್ಯಕ್ರಮವಾಯಿತು.

# ವರಮಹಾಲಕ್ಷ್ಮೀ ಹಬ್ಬ



ವರಮಹಾಲಕ್ಷ್ಮಿ ಹಬ್ಬ ನನ್ನ ತವರುಮನೆಯಾಗಲೀ ಅಥವಾ ಹುಬ್ಬಳ್ಳಿಯಲ್ಲಾಗಲಿ ವರಮಹಾಲಕ್ಷ್ಮಿ ಹಬ್ಬದ ಆಚರಣೆ ಮಾಡಿದ್ದಿಲ್ಲ. ನಾನು ಮದುವೆಯಾಗಿ ಬಂದಮೇಲೂ ಕೂಡ ವರಮಹಾಲಕ್ಷ್ಮಿ ಹಬ್ಬದ ವ್ರತಾಚರಣೆ ಇರಲಿಲ್ಲ. ೨೦೦೩ರರ ವರಮಹಾಲಕ್ಷ್ಮಿ ಹಬ್ಬದ ಸಮಯ - ಅದಮ್ಯಚೇತನದ ಕೆಲಸದ ನಿಮಿತ್ತ ಚರ್ಚೆಯಲ್ಲಿದ್ದಾಗ ಅನಂತಕುಮಾರ್ ಅವರು ದೆಹಲಿಯಿಂದ ಕರೆ ಮಾಡಿ ಬೆಂಗಳೂರಿಗೆ ಬರುವುದಾಗಿ ತಿಳಿಸಿದರು. ತಮ್ಮ ಜೊತೆಯಲ್ಲಿ ವಿರೋಧಪಕ್ಷದ ನಾಯಕಿ ಶ್ರೀಮತಿ ಸುಷ್ಮಾ ಸ್ವರಾಜ್ ಅವರು ಕೂಡ ಬರುವುದಾಗಿ ತಿಳಿಸಿದರು. ಅನಂತಕುಮಾರ್ ಅವರ ಕರೆಯ ನಂತರ ಅಡುಗೆ, ಪೂಜೆ, ದೇವರ ಅಲಂಕಾರ ಎಲ್ಲದರ ತಯಾರಿ ಪ್ರಾರಂಭವಾಯಿತು. ಸುಷ್ಮಾ ಸ್ವರಾಜ್ ಅವರ ಬರುವಿಕೆ ಎಲ್ಲರಲ್ಲೂ ಉತ್ಸಾಹ ತುಂಬಿತ್ತು. ಹೀಗೆ ಪ್ರತಿವರ್ಷ ನಮ್ಮ ಮನೆಯಲ್ಲಿ ವರಮಹಾಲಕ್ಷ್ಮಿ ಹಬ್ಬದ ಆಚರಣೆ ಪ್ರಾರಂಭವಾಯಿತು. ಪ್ರತಿ ವರ್ಷ ವರಮಹಾಲಕ್ಷ್ಮಿ ಹಬ್ಬದಂದು ಸುಷ್ಮಾ ಸ್ವರಾಜ್ ಅವರು ತಪ್ಪದೆ ನಮ್ಮ ಮನೆಯ ಪೂಜೆಗೆ ಬರುತ್ತಿದ್ದರು. ಹಲವಾರು ಬಾರಿ ಹಬ್ಬದ ಹಿಂದಿನ ದಿನವೇ ಬಂದು ನಮ್ಮ ಮನೆಯಲ್ಲಿ ಹಬ್ಬ ಮುಗಿಸಿ ಬಳ್ಳಾರಿಯಲ್ಲಿ ವರಮಹಾಲಕ್ಷ್ಮಿ ಹಬ್ಬದ ಪೂಜೆಗೆ ತೆರಳುತ್ತಿದ್ದರು.

ಆಗೆಲ್ಲ ಅನಂತಕುಮಾರ್ ಅವರು ಸುಷ್ಮಾ ಸ್ವರಾಜ್ ವರಮಹಾಲಕ್ಷ್ಮಿ ಹಬ್ಬಕ್ಕೆ ಬರುವುದೆಂದರೆ ಅವರು ತಮ್ಮ ತವರು ಮನೆಗೆ ಬಂದಂತೆ ಎಂದೂ ನಮ್ಮ ಮನೆಗೆ ಮಹಾಲಕ್ಷ್ಮಿ ಬಂದಂತೆ ಎಂದೂ ತಮ್ಮ ಸಂತಸ ವ್ಯಕ್ತಪಡಿಸುತ್ತಿದ್ದರು.




# ವಾಜಪೇಯಿ ಸ್ಮರಣೆ

೧೬ ಆಗಸ್ಟ್ ೨೦೧೮ರಂದು ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ನಿಧನರಾದರು. ಆವೇಳೆಗೆ ಅನಂತಕುಮಾರ್ ತೀವ್ರ ಅನಾರೋಗ್ಯದಿಂದಿದ್ದರೂ ನವದೆಹಲಿಗೆ ತೆರಳಿ ಅವರಿಗೆ ಅಂತಿಮ ನಮನ ಸಲ್ಲಿಸಿದರಲ್ಲದೆ. ವಾಜಪೇಯಿಯವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲೂ ಪಾಲ್ಗೊಂಡಿದ್ದರು. ಇದೇ ಅವರ ಕೊನೆಯ ಸಾರ್ವಜನಿಕ ಭಾಷಣವೂ ಆಗಿತ್ತು.

